ಹೋಗಿ ನೋಡಿಕೊಂಡು ಬಂದಿದ್ದಾರೆ. ೬೦೦-೧೦೦೦ ಗುಡಿಸಲುಗಳು ಸುಟ್ಟು ಹೋಗಿವೆ ಎಂದರೆ ಅದು ಸ್ವಲ್ಪಮಟ್ಟಿಗೆ ಅತಿಶಯೋಕ್ತಿಯಾಗುತ್ತದೆ. ಆದರೆ ನೂರಾರು ಜನ ನಿರ್ಗತಿಕರಾಗಿದ್ದಾರೆ, ಇದು ನಿಜ. ನಿನ್ನೆ ರಾತ್ರಿ ನಮ್ಮ ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿಯವರು ಮಧ್ಯರಾತ್ರಿ ವರೆಗೂ ಅಲ್ಲಿಯೇ ಇದ್ದರು. ಅವರಿಗೆ ಊಟ, ಮಲಗಲಿಕ್ಕೆ ಹಾಲುಕೊಡತಕ್ಕಂಥ ವ್ಯವಸ್ಥೆ ಮಾಡಿದ್ದರು. ಕಾರ್ಪೊರೇಷನ್ನಿನ ಎಲ್ಲಾ ಅಧಿಕಾರಿಗಳೂ ಇದ್ದರು. ಕಾರ್ಪೊರೇಷನ್ ಕಮೀಷನ್ನರೂ ಇದ್ದರು. ಇವತ್ತು ಪ್ರಧಾನ ಮಂತ್ರಿಗಳು ಬಂದಾಗ, ಸ್ವಾಭಾವಿಕವಾಗಿ ಶ್ರೀ ಆಸ್ಕರ್ ಫರ್ನಾಂಡೀಸ್ ಅವರು ಇದನ್ನು ಹೇಳಿದರು ಎಂದು ಕಾಣುತ್ತದೆ. ಮಾನ್ಯ ಪ್ರಧಾನ ಮಂತ್ರಿಗಳು ಭೇಟಿಗೆ ಹೊಡಲು ಕೇಳಿದ್ದರು. ಈ ರೀತಿಯ ದುರ್ಘಟನೆ ಆಗಿದೆಯಂತೆ, ಹೋಗಬೇಕು ಎಂದು ಹೇಳಿದರು. ಅದಕ್ಕೆ ನಾನು ಹೇಳಿದೆ ''ಹೋಗತಕ್ಕದ್ದು ಸರಿಯಲ್ಲ. ಅಂತಹ ದೊಡ್ಡ ಅನಾಹುತ ಏನೂ ಆಗಿಲ್ಲ. ಭೂಕಂಪ ಆಯಿತು, ಸಹಸ್ರಾರು ಜನ ಸತ್ತು ಹೋಗಿಬಿಟ್ಟರು ಎಂದರೆ ಸರಿ. ಆದ್ದರಿಂದ ಹೋಗತಕ್ಕಂಥ ಆಗತ್ಯ ನನಗೆ ಕಾಣುವುದಿಲ್ಲ'' ಎಂದು. ಆಗ ಅವರು ಇದರ ಬಗ್ಗೆ ಒಂದು ವ್ಯವಸ್ಥೆ ಮಾಡಿ ಎಂದು ಹೇಳಿದರು. ನಾವು ಸ್ವಲ್ಪ ಕೊಡುತ್ತೇವೆ, ತಾವು ತಮ್ಮ ಪ್ರಧಾನ ಮಂತ್ರಿಗಳ ರಿಲೀಫ್ ಫಂಡ್‌ನಿಂದ ಸ್ವಲ್ಪ ಕೊಡಿ ಎಂದು ಹೇಳಿದ್ದಕ್ಕೆ ಕೊಡುತ್ತೇನೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಇಲ್ಲಿ ಏನು ಅನಾಹುತ ಆಗಿದೆ, ಎಷ್ಟು ಜನ ನಿರ್ಗತಿಕರಾಗಿದ್ದಾರೆ ಇದರ ಬಗ್ಗೆ ವಿವರವಾಗಿ ಪತ್ರ ಬರೆಯುತ್ತೇನೆ ಎಂದು ಹೇಳಿದ್ದೇನೆ. ಮತ್ತು ಅವರಿಗೆ ಬೇರೆ ಕಡೆಗೆ ಹೊಸದಾಗಿ ಮನೆಗಳನ್ನು ಕೊಡಿಸತಕ್ಕಂಥ ವ್ಯವಸ್ಥೆ ಮಾಡುವುದೂ ಇದೆ. ಐದುನೂರು ರೂಪಾಯಿ ಕೊಟ್ಟರೆ ಅದು ಅವರಲ್ಲಿ ಶಾಶ್ವತವಾಗಿ ಉಳಿಯುವುದಿಲ್ಲ. ಅದಕ್ಕಾಗಿ ಜಾಗ ಹುಡುಕಿ ಮಂಜಿ ಹೆಂಚಿನ ಮನೆಯನ್ನೇ ಮಾಡುವುದು ಸಾಧ್ಯವೇ ಎಂದು ಯೋಚನೆ ಮಾಡಿ ಒಂದು ಸಣ್ಣ ಯೋಜನೆಯನ್ನು ತಯಾರು ಮಾಡುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.--ತಾತ್ಕಾಲಿಕವಾಗಿ ಅವರಿಗೆ ವ್ಯವಸ್ಥೆ ಮಾಡಿ. ಟ್ರಾನ್ಸಿಟ್ ಕ್ಯಾಂಪ್ ರೀತಿಯಲ್ಲಾದರೂ ತಾವು ಮಾಡಬಹುದು.

ಶ್ರೀ ರಾಮಕೃಷ್ಣ ಹೆಗಡೆ.--ತಾತ್ಕಾಲಿಕವಾದ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ.

ಶಾಸನ ರಚನಾ ಕಲಾಪಗಳು

೧೯೮೭ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ವೀರಣ್ಣ (ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ರಾಜ್ಯ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, ೧೯೮೭ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

MR. SPEAKER.—Now Smt. Muktharunnisa will commence.

SMT. MUKTHARUNNISA (Narasimharaja).— Respected spaker Sir in page 5, it has been mentioned in Item-7 under column 3 and 4 for the figures 135 rupees 275 rupees. For this, it is enhanced to Rs. 675 and Rs. 1375. This is one, and on page 13 it has mentioned here that

> ''Motor Vehicles plying for hire or reward used for transport of person in respect of which permits have been issued under Section 63 of the Motor Vehicles Act, 1939, and permitted to carry more than twelve persons excluding the driver for every person which the vehicle is permitted to carry''

Here, for a period not exceeding 7 days, it is 135 rupees and for a period exceeding 7 days but not exceeding 31 days, is Rs. 275. But now it has come to 675 and for one month 1375. In this connection, I would like to ask the Chairman, the all India permit tourist taxies have heavily enhanced. During the period of Shri P. G. R. Sindhia there was a proposal even for one seat 500 rupees they were decreased to 400 at time. But now they had increased 500 to 2000 rupees. Now it comes to Rs. 2500. I can say that motor vehicle tax is compensatory in nature cannot levied in excess of the expenses required to be incurred for maintenance or making of roads, bridges and for providing other amenities to the motor vehicles and expenses incurred on enforcement of motor vehicles Act. Sir I like to say that the same has to be levied uniformly on the user of the road. There is no difference between the use of the road by stage carriages vehicles and contract carriage vehicles or all India tourist vehicles, and whereas state carriages make use of the road all the 365 days in a year. But the difference is the all India tourist buses. There is difference. The State carriages, they work for 365 days regularly. But all India tourist vehicles cannot be used on the road for all the 365 days in a year and its use is less and its contribution towards the road is less than that of the State carriages as the vehicles have to go outside the State for every trip. Sir, I would like to say that the fare of the State carriages carrying the passengers and the All India tourist vehicles are fluctuating. It is not fixed like that of State carriages.

(SHRI Y. K. RAMAIAH in the Chair).—

But here I am very much surprised to not that the tourism industry is not encouraged. Your Government has to encourage the tourists in the State. Instead of that if you enhanced the tax on the vehicles, by this how can you encourage the tourists ? If you increase the fare of the ticket, the tourists will not come to our Karnataka. We will loose monetary benefits as well as the importance of Karnataka because the Karnataka is a tourist centre in South. It is a paradise in South and we will loose our importance by this heavy tax on vehicles. Sir I would like to say that all India permits will be issued by all the States in the country to encourage tourism, not only in Karnataka. This is the all India permit. They will get from there and only to encourage tourism and the stiff increase in tax proposed in the Budget is very funny. Actually it will prevent the tourist vehicles of other States from entering into the Stage of Karnataka In other States, when the tax was not enhanced it was less and our Karnataka was more. In Tamil Nadu it was only per quarter Rs.

5400. In Andhra Rs. 12075 and in Goa Rs. 340, Goa is such a beautiful city, everybody goes there and there tax is less and Pondicherry Rs. 6300 and in Kerala Rs. 7700 and Maharashtra, such a big city every body like to see Maharashtra, Bombay and there also Rs. 900. But here Rs. 85,000 per quarter means, what is the value of the bus ? The person who purchase the bus to earn money for their livelihood, they will not purchase to spend so much amount on bus only and to donate for heavy tax they purchase for their livelihood. they will earn and they will pay the tax also and on the other hand the Government is happy that they will help the tourists. But here Rs. 85,000 per quarter. What about the repair charges, what about labourers charges and what about their livelihood ?

These bus operator will have to look after their own families. They have to spend lot of money for this business. A person does the business to eke but his livelihood and to feed his dependents. It is very difficult for them to pay Rs. 85,000 per quarter. The value of Luxury Bus itself is Rs 3 lakhs. Apart from tax, they have to pay to Police, Regional Transport authorities and other mamuls. The proposal earlier was to impose Rs. 400 I would like the Government to decrease this tax by bringing an amendment before the Bill is passed by this House. Thank you very much.

ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ).— ಸನ್ಮಾನ್ಯ ಅಧ್ಯಕ್ಷರೇ, ಈ ಮೋಟಾರ್ ವೆಹಿಕಲ್ಸ್ ಟ್ಯಾಕ್ಸೇಷನ್, ಈ ಸರಕಾರಕ್ಕೆ ಒಂದು ತರಹ ಅಡಿಷನಲ್ ರಿಸೋರ್ಸಸ್ ಮೊಬಿಲೈಜೇಷನ್ ಮಾಡತಕ್ಕ ಒಂದು ದೊಡ್ಡ ನಿಧಿಯಾಗಿ ಪರಿಣಮಿಸಿದೆ. ಈ ಮೋಟಾರ್ ವೆಹಿಕಲ್ ಟ್ಯಾಕ್ಸ್‌ನ್ನು ಷ್ಟಿಕ್ಟಲಿ ಒಂದು ಎ. ಆರ್. ಎಮ್. ರಿಸೋರ್ಸಸ್ ಎಂದು ಯಾವಾಗಲೂ ಕರೆಯುವುದಕ್ಕೆ ಸಾಧ್ಯವಾಗುವುದಿಲ್ಲ. ರೋಡಿನವೇರ್ ಅಂಡ್ ಟೇರ್ ಕಂಪೆನ್‌ಸೇಟ್ ಮಾಡಲಿಕ್ಕೆ ಮತ್ತು ರೋಡ್ಸ್ ವೇಂಟೆನೆನ್ಸ್ ಮಾಡಲಿಕ್ಕೆ ಇದನ್ನು ಉಪಯೋಗ ಮಾಡಬೇಕೇ ಹೊರತು, ಇದನ್ನು ಪ್ರತ್ಯೇಕವಾಗಿ ನಿವ್ಮ್ ಯೋಜನೆಗಳಿಗೆ ಮತ್ತು ಅಭಿವೃದ್ಧಿ ಕಾರ್ಯಕ್ಕೆ ಒಂದು ಬೇಸಿಕ್ ಆದ ಸಂಪನ್ಮೂಲ ಎಂದು ತಿಳಿದುಕೊಳ್ಳತಕ್ಕ ಯಾವ ಒಂದು ತೆರಿಗೆ ನೀತಿ ಇದೆ. ಅದು ಆ ಒಂದು ತೆರಿಗೆ ಸಿದ್ಧಾಂತಕ್ಕೇ ವಿರೋಧವಾಗಿದೆ. ಸುಪ್ರೀಂ ಕೋರ್ಟ್ ಕೂಡಾ, ಮೋಟಾರ್ ವೆಹಿಕಲ್ ಟ್ಯಾಕ್ಸೇಷನ್ ವಿಚಾರ ಬಂದಂಥ ಂದರ್ಭದಲ್ಲಿ ಈ ತೆರಿಗೆ ನೀತಿಯ ಬಗ್ಗೆ ಒಂದು ವ್ಯಾಖ್ಯಾನ ಕೊಟ್ಟಿದ್ದೂ ಕೂಡಾ ಇದೆ. ಈಗ ಏನಾಗಿದೆ ಎಂದರೆ, ಪ್ರತಿವರ್ಷ ಕೂಡಾ ಹೋದವರ್ಷ ಮತ್ತು ಆದಕ್ಕಿಂತ ಹಿಂದೆ ಕೂಡಾ ಮೋಟಾರ್ ವೆಹಿಕಲ್ ಟ್ಯಾಕ್ಸ್‌ನಲ್ಲಿ ಹೆಚ್ಚಳ ಇದ್ದು ಆದೂ ಕೂಡಾ ಅತ್ಯಧಿಕ ಹೆಚ್ಚಳವಾಗಿತ್ತು. ಈಗ ತಾವು ಸಂಮಾರು ೧೦ ಕೋಟಿ ಚಿಲ್ಲರೆ ಸಂಪನ್ಮೂಲವನ್ನು ಈ ತೆರಿಗೆಯಿಂದ ಒದಗಿಸಬೇಕೆಂದು ಹೇಳಿ ಹೊರಟಿದ್ದೀರಿ. ಇದೂ ಕೂಡಾ ಒಂದು ರೀತಿ ಅಸಮಾನತೆಯಿಂದ ಕೂಡಿದೆ. ಎಂಟೂ, ಎಂಟೂವರೆ ಕೋಟಿ ರೂಪಾಯಿಗಳು ಅಲ್ ಇಂಡಿಯಾ ಟೂರಿಸ್ಟ್ ಬಸ್‌ನಿಂದ ಬರಬೇಕೆಂದು ತಾವು ಈ ಕಡೆ ನೇರವಾದ ದೃಷ್ಟಿ ಇಟ್ಟುಕೊಂಡು ಹೋದುದನ್ನು ನೋಡಿದರೆ, ಈ ತೆರಿಗೆ ಹಾಕತಕ್ಕಂಥ ವಿಚಾರದಲ್ಲಿ ತಾವು ಯಾವುದೇ ವಿವೇಕವನ್ನು ತೋರಿಸಲಿಲ್ಲ ಎಂದು ಹೇಳಿ ನಾನು ಖಂಡಿತವಾಗಿ ಹೇಳಬೇಕಾಗಿದೆ. ಈ ಮೋಟಾರ್ ವೆಹಿಕಲ್ ಟ್ಯಾಕ್ಸ್‌ನಲ್ಲಿ ಒಂದು ಮಾರ್ಪಾಡು ಸಹ ಮಾಡಿದ್ದೀರಿ, ರಿಯಾಯಿತಿ ಎಂದು ಹೇಳಿ ತಾವು ಯಾರಿಗೆ ಫೂಲ್ ಮಾಡುವುದಕ್ಕೆ ಹೊರಟ್ಟಿದ್ದೀರಿ ಎಂದು ಗೊತ್ತಾಗುತ್ತಿಲ್ಲ. ಇದನ್ನು ಯಾರೂ ಪರಿಶೀಲನೆ ಮಾಡಿಕೊಂಡು ಹೋಗುವುದಿಲ್ಲ, ಸದಸ್ಯರೆಲ್ಲಾ ಹಾಗೇ

ನೋಡಿಕೊಂಡಿದೆ ಹೋಗಂತ್ತಾರೆ ಎಂದು ತಾವು ತಿಳಿದುಕೊಂಡಿರಬುಹುದ ಆದರೆ ಇಂತಹ ರಿಯಾಯಿತಿ ಏತಕ್ಕೆ ಕೊಡುತ್ತೀರಿ ? ರಿಯಾಯಿತಿ ಎಂದು ಕೊಟ್ಟಿದ್ದೀರಿ, ತಾವು ಇದನ್ನು ಪರಿಶೀಲನೆ ಮಾಡಿದ್ದೀರೋ ಇಲ್ಲವೋ ಗೊತ್ತಿಲ್ಲ. ಇವರು ಏನು ಮಾಡಿದ್ದಾರೆ ಎಂದರೆ, ಅಧ್ಯಕ್ಷರೇ, ಆಲ್ ಇಂಡಿಯಾ ಟೂರಿಸ್ಟ್ ಬಸ್‌ಗೆ ಎರಡೂವರೆ ಸಾವಿರ ಇದ್ದುದನ್ನು ಎರಡು ಸಾವಿರಕ್ಕೆ ಇಳಿಸಿದ್ದಾರೆ. ಮೋಟಾರ್ ವೆಹಿಕಲ್ ಟ್ಯಾಕ್ಸ್‌ನಲ್ಲಿ ಕಡಿಮೆ ಮಾಡಿದ್ದೇವೆ ಎಂದು ಹೇಳಿ ಫ್ರೈಟ್ ಚಾರ್ಜಸ್ ಜಾಸ್ತಿ ಮಾಡಿದ್ದಾರೆ. ಆ ಮೇಲೆ ಸಾಗಾಣಿಕೆ ವೆಚ್ಚವನ್ನು ಸಹ ಜಾಸ್ತಿ ಮಾಡಿದ್ದೀರಿ. It is just an eye wash. The decrease that you have affected is quite minimum. If not Rs. 8.5 crores, you will be getting atleast Rs. 7 crores. ಎಷ್ಟು ಇಂಪ್ಲಿಕೇಶನ್ ಆಗುತ್ತದೆ ಎನ್ನುವುದನ್ನು ದಯಮಾಡಿ ಹೇಳಿ. ತಾವೇಷ್ಟು ಬಿಟ್ಟಿದ್ದೀರಿ ? ತಾವು ಬಜೆಟ್ ಪ್ರೊಪೋಜಲ್ಸ್‌ನಲ್ಲಿ ಎಷ್ಟು ನಿರೀಕ್ಷೆ ಮಾಡಿದ್ದೀರಿ ? ಈಗ ಎಷ್ಟು ರಿಯಾಯಿತಿ ಕೊಟ್ಟಿದ್ದೀರಿ ? ಅದನ್ನೆಲ್ಲಾ ತಾವು ದಯಮಾಡಿ ವಿವರವಾಗಿ ಹೇಳಬೇಕು. ಆ ಮೇಲೆ ನಮ್ಮ ಸಹೋದ್ಯೋಗಿ ಸಹೋದರಿಯವರು ಆಲ್ ಇಂಡಿಯಾ ಪರ್ಮಿಟ್ ಬಗ್ಗೆ ಸಾಕಷ್ಟು ವಿಚಾರಗಳನ್ನು ಹೇಳಿದರು. ತಾವು ಯಾವ ರೀತಿ ಬಜೆಟ್‌ನಲ್ಲಿ, ಟೂರೀಸಂ ಬಗ್ಗೆ ವಾಖ್ಯಾನ ಮಾಡಿ ಸಾಕಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೀರೋ ಅಷ್ಟು ಪ್ರೋತ್ಸಾಹವನ್ನು ತಾವು ಈ ಪ್ರವಾಸೋದ್ಯಮಕ್ಕೆ ಕೊಡಬೇಕು. ಸನ್ಮಾನ್ಯ ಮುಖ್ಯ ಮಂತ್ರಿಗಳು ಕೂಡ ಕೇಂದ್ರ ಸರ್ಕಾರದ ಮಂತ್ರಿಗಳ ಜೊತೆ ಸಮಾಲೋಚನೆ ಮಾಡಿದ್ದಾರೆ. ಕೇಂದ್ರ ಸರ್ಕಾರದ ಅಧಿಕಾರಿಗಳೆಬ್ಬರು ರಾಜ್ಯದ ಬೇರೆ ಬೇರೆ ಕಡೆಗಳಲ್ಲಿ ಸಂಚಾರ ಮಾಡಿ ಬಂದರು. ಆಗ ಅವರು ಪರ್ಸೆಂಟೇಜ್ ಜಾಸ್ತಿ ಮಾಡಿ ಎಂದೂ ಹೇಳಿದರು. ಈ ಪ್ರವಾಸೋದ್ಯಮದ ಅಭಿವೃದ್ಧಿ ನಮ್ಮ ರಾಜ್ಯಕ್ಕಿಂತ ಬೇರೆ ರಾಜ್ಯಗಳಲ್ಲಿ ಜಾಸ್ತಿ ಆಗಿದೆ. Even according to earlier rate, it was Rs. 500 per seat per quarter. It was the highest in the South India. The next highest was Rs. 345 in Andhra Pradesh. The tourism traffic is more in Southern belt. There is a competition between Tamilnadu and Karnataka. Tamilnadu is already on the top as far as the Tourism is concerned. ಕರ್ನಾಟಕ ರಾಜ್ಯ ಅದಷ್ಟು ಮಟ್ಟಿಗೆ ಪ್ರವಾಸೋದ್ಯಮವನ್ನು ಅಭಿವೃದ್ಧಿ ಮಾಡಿ ಪ್ರವಾಸಿಗರನ್ನು ಆಕರ್ಷಣೆ ಮಾಡುವಂತಹ ಕೆಲಸವನ್ನು ಮಾಡಬೇಕು. Tamilnadu has not increased at all in their Budget. Even Andhra pradesh has also not incresed. In respect of Kerala, we are yet to see whether they are going to increase or not, pandicherry has also not increased.

(ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಈಗ ತಾವು ಬಜೆಟ್‌ನಲ್ಲಿ ಹೇಳಿದುದ್ದು ೨೫೦೦ ರೂಪಾಯಿಗಳು ಈಗ ತಾವೇನು ಮಾಡಿದ್ದೀರಿ ಎಂದರೆ ಅದನ್ನು ೨೦೦೦ ರೂಪಾಯಿಗಳಿಗೆ ಇಳಿಸಿದ್ದೀರಿ. ಇದರಿಂದ ಪ್ರವಾಸೋದ್ಯಮಕ್ಕೆ ಸಾಕಷ್ಟು ಪೆಟ್ಟು ಬೀಳುತ್ತದೆ. ಇದೇ ರೀತಿಯಲ್ಲಿ ತಾವು ಮುಂದುವರಿಸಿಕೊಂಡು ಹೋಗುವುದಾದರೆ ಇನ್ನು ಒಂದು ದಶಕಗಳ ಕಾಲವಾದರೂ ಈ ಪ್ರವಾಸೋದ್ಯಮ ಅಭಿವೃದ್ಧಿಯಾಗುವುದಿಲ್ಲ. We must have a long range perspective planning for Tourism. ಇದರ ಪರಿಣಾಮ ಈಗ ಗೊತ್ತಾಗಿದ್ದರೂ ಕೆಲವಾರು ವರ್ಷಗಳಾದ ಮೇಲೆ ಇದರ ಪರಿಣಾಮ ಗೊತ್ತಾಗುತ್ತದೆ. ಟ್ಯಾಕ್ಸ್‌ನಲ್ಲಿ ರಿಯಾಯಿತಿ ತೋರಿಸುತ್ತೇವೆ, ಎರಡೂವರೆ ಸಾವಿರ ಇದ್ದದ್ದನ್ನು ಎರಡು ಸಾವಿರ ರೂಪಾಯಿಗಳಿಗೆ ಇಳಿಸಂತಿದ್ದೇವೆಂದು ಮೊಸಳೆ ಕಣ್ಣೀರು ಸುರಿಸಿದ್ದೀರಿ. ಇದರಿಂದ ಏನೂ ಪ್ರಯೋಜನ ಇಲ್ಲ. ನೀವು ಫ್ರೈಟ್‌ಚಾರ್ಜ್‌ನ್ನು ಏರಿಸಿದ್ದೀರಿ. ಆದರೆ, ಕೇಂದ್ರದವರು ಫ್ರೈಟ್ ಚಾರ್ಜ್‌ನ್ನು ಏರಿಸಿಲ್ಲ. ರೈಲ್ವೇ ಫ್ರೈಟ್‌ನ್ನು ಏರಿಸಿಲ್ಲ. ನೀವು ಉದ್ದೇಶ ಪೂರ್ವಕವಾಗಿ ಫ್ರೈಟ್ ಚಾರ್ಜ್‌ನ್ನು ಏರಿಸಿದ್ದೀರಿ, ಇದು ಯಾವ ತರ್ಕ ? ಇದರಲ್ಲಿ ಏನು ನ್ಯಾಯ ಇದೆ ? ಗೂಡ್ಸ್ ವೆಹಿಕಲ್ ಮೇಲೆ ನೀವು ಹೆಚ್ಚು ತೆರಿಗೆಗಳನ್ನು ಹಾಕಬಾರದಾಗಿತ್ತು. ಇದರಿಂದ ಬೆಲೆಗಳ ಮೇಲೆ ಬಹಳ ಪರಿಣಾಮ ಬೀರುತ್ತದೆ.

ಫ್ರೈಟ್ ತೆರಿಗೆ ಜಾಸ್ತಿ ಮಾಡಿದರೆ ಜನಸಾಮಾನ್ಯರಿಗೆ, ಟ್ರೇಡರ್ಸ್‌ಗಳಿಗೆ, ಎಫೆಕ್ಟ್ ಆಗುತ್ತದೆ. ಫ್ರೈಟ್‌ನ್ನು ಜಾಸ್ತಿ ಮಾಡಿರುವುದರಿಂದ ಹತ್ತೂವರೆ ಕೋಟಿ ರೂಪಾಯಿಗಳ ಸಂಪನ್ಮೂಲ ಸರ್ಕಾರಕ್ಕೆ ಬರುತ್ತದೆಂದು ಹೇಳಿದ್ದೀರಿ. ನನಗೆ ಗೊತ್ತಿರುವ ಹಾಗೆ ವರ್ಷಕ್ಕೆ ಇದರಿಂದ ೨೦ ರಿಂದ ೨೫ ಕೋಟಿ ರೂಪಾಯಿಗಳಷ್ಟು ಸಂಪನ್ಮೂಲ ಸರ್ಕಾರಕ್ಕೆ ಬರುತ್ತದೆ. What you have shown as 10.46 crores is again a national one. ಇದರಲ್ಲಿ ೨೦ ರಿಂದ ೨೫ ಕೋಟಿ ರೂಪಾಯಿಗಳಷ್ಟು ಆದಾಯ ಬರತಕ್ಕಂಥ ವ್ಯವಸ್ಥೆಯನ್ನು ಮಾಡಿಕೊಂಡಿದ್ದೀರಿ. ಯಾವ ರೀತಿ ಪ್ರತಿ ವರ್ಷ ತೆರಿಗೆಗಳನ್ನು ಹಾಕುತ್ತಿದ್ದೀರಿ ? ಈ ರೀತಿ ತೆರಿಗೆ ಹಾಕಿರುವುದರಿಂದ ವ್ಯಾಪಾರ,–ವಹಿವಾಟು, ಕೈಗಾರಿಕೆಗಳಿಗೆ, ಪ್ರವಾಸೋದ್ಯಮಗಳಿಗೆ ಬಹಳ ತೊಂದರೆಯಾಗುತ್ತದೆ. It is on anti-dose for development in Karnataka. If you have temporary satisfaction, that will be a sadistic satisfaction because you get some money. ವ್ಯಾಪಾರ–ವಹಿವಾಟು, ಕೈಗಾರಿಕೆ, ಪ್ರವಾಸೋದ್ಯಮಗಳಲ್ಲಿ ಸಂವೃದ್ಧಿಯನ್ನು ಮಾಡಬೇಕು. ಆದರೆ, ನೀವು ಮಾಡಿರುವುದು ಆ ನೀತಿಗೆ ವಿರುದ್ಧವಾಗಿದೆ. ಇದರಿಂದ ತೆರಿಗೆ ಭಾರ ಹೆಚ್ಚಾಗುತ್ತದೆ. ಇದರಿಂದ ಪರಿಹಾರ ಕೊಟ್ಟಂತೆ ಆಗುವುದಿಲ್ಲ, ಸರಿಯಾದ ಮದ್ದು ಕೊಟ್ಟಂತೆ ಆಗುವುದಿಲ್ಲ. ಆದಂದರಿಂದ, ಈ ತಿದ್ದುಪಡಿ ವಿಧೇಯಕವನ್ನು ಸಂಪೂರ್ಣವಾಗಿ ಪುನಃ ಪರ್ಯಾಲೋಚಿಸಬೇಕು. ಒಂದು ಸಮಗ್ರವಾದಂಥ, ಅಭಿವೃದ್ಧಿ ಪರವಾದಂಥ ತೆರಿಗೆ ನೀತಿಯನ್ನು ಈ ಮೋಟಾರ್ ವೆಹಿಕಲ್ ಟ್ಯಾಕ್ಸ್‌ನಲ್ಲಿ ತರಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಆಗ್ರಹಪಡಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.(ರಾಜಾಜಿನಗರ).—ಸಭಾನ್ಯ ಅಧ್ಯಕ್ಷರೇ, ಈಗಾಗಲೇ ಈ ಮಸೂದೆ ಬಗ್ಗೆ ಸಾಕಷ್ಟು ಬೆಳಕನ್ನು ಮಾನ್ಯ ಮೊಯಿಲಿಯವರು ಚೆಲ್ಲಿದ್ದಾರೆ, ಶ್ರೀಮತಿ ಮುಕ್ತರ್ ಉನ್ನಿಸಾ ಬೇಗಮ್‌ರವರೂ ಸಹ ಬೆಳಕನ್ನು ಚೆಲ್ಲಿದ್ದಾರೆ. ನಾನೂ ಸಹ ಇದರ ಬಗ್ಗೆ ಸಪ್ಲಿಮೆಂಟರಿ ಡಿಮ್ಯಾಂಡ್ ಬಂದಾಗ ಕೂಡ ಮಾತನಾಡಿದ್ದೇನೆ. ಆದ್ದರಿಂದ ಮತ್ತೆ ಅದನ್ನೇ ಪುನರ್ ಉಚ್ಚಾರ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ, ತೆರಿಗೆ ಬಾಬತ್ತು ಬಂದಿರುವುದರಿಂದ ಎರಡು ಮೂರು ಅಂಶಗಳನ್ನು ಸ್ವಲ್ಪ ಮಟ್ಟಿಗೆ ಪುನರ್ ಉಚ್ಚಾರಣೆ ಮಾಡಬೇಕಾಗಿ ಬಂದಿದೆ. ಮೊದಲನೆಯದಾಗಿ ಏನು ಎಂದರೆ, ಏನು ಒಂದು ತೆರಿಗೆಯನ್ನು ಇವರು ಹೊರಿಸಿದ್ದಾರೆ, ಅದು ಯಾವುದೇ ಕೈಗಾರಿಕೆ ಇರಲಿ, ಯಾವುದೇ ವಹಿವಾಟು ಇರಲಿ ಅಥವಾ ಯಾವುದೇ ವ್ಯವಸ್ಥೆ ಇರಲಿ. ಅವರಿಂದ ಕೆಲವು ಆ ವ್ಯವಸ್ಥೆಗಳು ನಿರ್ನಾಮವಾಗುತ್ತವೆ. ಅಷ್ಟು ಮಾತ್ರ ಅಲ್ಲ ನಮ್ಮ ರಾಜ್ಯದ ಅಭಿವೃದ್ಧಿಗೆ ದೇಶದ ಅಭಿವೃದ್ಧಿಗೆ ತೊಂದರೆಯಾಗುತ್ತದೆ. ಎಲ್ಲಾ ರೀತಿಯಲ್ಲೂ ಅನುಕೂಲವಾಗಬೇಕು ಎನ್ನುವ ಅಭಿಪ್ರಾಯ ಇಟ್ಟುಕೊಂಡು ತೆರಿಗೆಗಳನ್ನು ಹಾಕುವುದು ಒಂದು ನೀತಿಯಾಗಿರುತ್ತದೆ. ಬರೀ ನಮಗೆ ಹಣ ಬರಬೇಕು ಎಂದು ತೆರಿಗೆ ಹಾಕುವುದು ಸರಿಯಲ್ಲ. ತೆರಿಗೆಗಳಿಂದ ಆದಾಯ ಹೆಚ್ಚಾದರೆ ಅಭಿವೃದ್ಧಿ ಕಾರ್ಯ ಕ್ರಮಗಳನ್ನು ಮಾಡಬಹುದು. ಅಭಿವೃದ್ಧಿ ಮಾಡುವುದಕ್ಕೆ ಬದಲಾಗಿ ಬರೀ ತೆರಿಗೆಗಳನ್ನು ಹಾಕುವುದು ಯಾವ ನೀತಿ ? ತೆರಿಗೆ ಬರುವ ಮೂಲವನ್ನೇ ಸಾಯಿಸಿ ಬಿಟ್ಟರೆ ಮುಂದೆ ತೆರಿಗೆ ಹೇಗೆ ಬರಬೇಕು ? ಇವೊತ್ತಿನ ದಿವಸ ಅಭಿವೃದ್ಧಿಯಲ್ಲಿ ಯಾವ ಗುರಿಯನ್ನು ಮುಟ್ಟಬೇಕೋ ಆ ಗುರಿಯನ್ನು ಮುಟ್ಟವುದಕ್ಕೆ ಸಾಧ್ಯವಾಗಿಲ್ಲ ಒಂದು ಕಡೆ ಅನುಕೂಲಮಾಡುತ್ತೇವೆಂದು ಹೇಳಿ, ಒಂದು ಕಡೆ ಹೆಚ್ಚು ತೆರಿಗೆಗಳನ್ನು ಹಾಕುವುದೆ ಧ್ವಂಧ್ವ ನೀತಿಯಾಗಿದೆಹಾಗೂ ವಿರೋಧಾಭಾಸವಾಗಿದೆ. ಏಕೆಂದರೆ, ಪ್ರವಾಸೋದ್ಯಮ ಇಲಾಖೆಗೆ ಪ್ರಾಮುಖ್ಯತೆ ಕೊಂಡಬೇಕು. ದೇಶದ ಪರಿಷ್ಕರು ಮತ್ತು ಸರಕಾರವು ಸಹ ಮೊದಲಿನಿಂದಲೂ ಇದನ್ನು ಹೇಳಿಕೊಂಡು ಬಂದಿದ್ದಾರೆ, ಅವರು ಹೇಳಿರುವುದರಲ್ಲಿ ಒಂದು ಮಾತ್ರ ತಮ್ಮ ಗಮನಕ್ಕೆ ತರುತ್ತೇನೆ.

I am quoting from the plan document.

" Tourism is now recognised as an activity generating a number of social and economic benebits. It promotes national integration and internatinal underatsdings, creates employment opportunities and aogumenta foreign exchange earnings.Tourism also gives suppoet to liocal hanmdicrafts and eultural activities. Expenditure by tourists has multiplier effect and also generates considerable tax

revenue. Over the years, tourism has emerged as an importanta element of current foreign exchange earnings comparable to some of the major merchandise exports. Foreign exchange earnings from Tourism which amounted to about Rs. 32 crores in 1971-72 have been increasing from year to year and in 1982-83 these amount to about Rs. 1031 crores. since import of goods needed for tourism is quite limited the tourist earnings have a relatively large value added component. Tourism is an expanding industry all over the world and the potentioal for tourist earnings in India is very high. Domestic tourism played and continue to play a very big role in the national objective of promoting social and cultural cohesion and national integration. Its contribution to generation of employment is also very high. the seasonal pattren of domeseic tourism dsbbers from that of foreign tourism However use of expensive international class hotels and other facilities by domestic tourists shold be discouraged by appropriate means to economise on scarce resources", ನಮ್ಮದು ಸೀಸನಲ್ ಪ್ರವಾಸೋದ್ಯಮ. ವಿದೇಶೀಯರು ಪ್ರಪಂಚ ತಿರುಗುವ ಹಾಗೆ ನಾವು ತಿರುಗುವುದಿಲ್ಲ. ಅವರು ಮಾಡಿದ ಹಾಗೆ ಪ್ರವಾಸ ಕಾರ್ಯಕ್ರಮಗಳನ್ನು ನಾವು ಮಾಡುವುದಿಲ್ಲ. ನಮ್ಮಲ್ಲಿ ಇರುವ ಅವಕಾಶದಲ್ಲಾದರೂ ಕೂಡ ಸ್ವಲ್ಪ ಮಟ್ಟಿಗೆ ನಮ್ಮ ಜನರು ಭಾಗವಹಿಸುವಂಥ ಒಂದು ಅವಕಾಶ ಬೇಕು. ನೌಕರರಿಗೆ ರಜೆ ಬೇಕು, ಎಲ್‌ಟಿಸಿ ಸೌಲಭ್ಯ ಇತ್ಯಾದಿಗಳು ಇರಬೇಕು. ಕಾರ್ಮಿಕರು, ಮಧ್ಯಮವರ್ಗದವರು, ಮತ್ತು ಸಾಮಾನ್ಯವಾಗಿ ಎಲ್ಲರೂ ಆದರಲ್ಲಿ ಆಸಕ್ತಿ ವಹಿಸುವಂತೆ ಒಂದು ವ್ಯವಸ್ಥೆಯನ್ನು ಮಾಡಬೇಕು, ದೊಡ್ಡ ದೊಡ್ಡ ಹೋಟೆಲುಗಳನ್ನು ಮಾಡಿ ಪ್ರವಾಸಿಗಳಿಗೆ ಹೆಚ್ಚು ಖರ್ಚು ಬರುವಂತೆ ಮಾಡುವ ಬದಲು ಸಣ್ಣ ಸಣ್ಣ ಹೋಟೆಲ್‌ಗಳು ಉತ್ತಮ ರೀತಿಯಲ್ಲಿ ಪ್ರವಾಸಿಗಳಿಗೆ ಸೌಲಭ್ಯಗಳನ್ನು ಒದಗಿಸುವಂತಹ ಒಂದು ಪಿರ್ಪಾಡು ಮಾಡಿದರೆ ಪ್ರವಾಸಿಗರಿಗೆ ಖರ್ಚು ಕಡಿಮೆ ಬರುತ್ತದೆ. ಬೇಕಾದರೆ ದೊಡ್ಡ ದೊಡ್ಡ ಹೋಟೆಲ್‌ಗಳು ಅವಶ್ಯಕ ಎನಿಸಿದಲ್ಲಿ ಇರಲಿ. ಇಂತಹ ಒಂದು ದಿಸೆಯಲ್ಲಿ ಏನಾದರೂ ಯೋಜನೆಗಳನ್ನು ಮಾಡುತ್ತಾ ಇದ್ದೀರಾ ಎಂದು ನಾನು ಕೇಳಬಯಸುತ್ತೇನೆ. ಪ್ರಧಾನಿ ರಾಜೀವಗಾಂಧಿಯವರ ನೇತೃತ್ವದಲ್ಲಿ ನೈರೋಬಿನೇ ಇಸವಿ ಆಗಸ್ಟ್ ೨೨ ರಂದು ಒಂದು ಸಮ್ಮೇಳನ ಮಾಡಿದರು. ಆದರಲ್ಲಿ ಎಲ್ಲಾ ರಾಜ್ಯಗಳ ಪ್ರವಾಸೋದ್ಯಮ ಮಂತ್ರಿಗಳು ಭಾಗವಹಿಸಿದ್ದರು, ಆಗ ಅವರು ಏನು ಹೇಳಿದರು ಅಂದರೆ, ". Tourism has not been taken seriously in our country. is his the criticism made by this Prime Minister of a country. ನಾನು ಹೇಳುವುದೇನೆಂದರೆ, ಆ ದೃಷ್ಟಿಕೋನವನ್ನು ಇಟ್ಟು ಕೊಂಡು ಆ ಚೌಕಟ್ಟಿನೊಳಗೆ ನಮ್ಮ ನ್ಯಾಷನಲ್ ಆಥರೈಸ್ಡ್ ಪಾಲಿಸಿ ಇರಬೇಕು, ಟ್ರಾನ್ಸ್‌ಪೋರ್ಟ್ ಪಾಲಿಸಿ ಇರಬೇಕು, ಟ್ಯಾಕ್ಸೇಶನ್ ಪಾಲಿಸಿ ಇರಬೇಕು. ಆ ರೀತಿಯ ಒಂದು ವ್ಯವಸ್ಥೆ ಇಡಬೇಕಾಗುತ್ತದೆ. ಆ ಚೌಕಟ್ಟಿನೊಳಗೆ ಟೂರಿಸಮ್ ಪಾಲಿಸಿ ಇದೆಯೇ ಎಂದರೆ ನನಗೆ ಸಮರ್ಪಕವಾದ ಉತ್ತರ ಸಿಗುತ್ತದೆ ಎಂದು ನನಗಂತೂ ಗೊತ್ತಿಲ್ಲ. ಹಿಂದೆ ಮಾನ್ಯ ಮೊಯ್ಲಿಯವರು ಮತ್ತಿತರರು ಈ ಬಗ್ಗೆ ಸಾಕಷ್ಟು ಮಾತನಾಡಿದ್ದಾರೆ. ಆಗ ನಮ್ಮ ರಾಜ್ಯದ ಹಂಪೆಯನ್ನು ಒಂದು ಸುವ್ಯವಸ್ಥಿತ ಪ್ರವಾಸಿ ಕೇಂದ್ರವನ್ನಾಗಿ ಮಾಡಬೇಕೆಂದು, ಅದರ ಮೂಲಕ ಪ್ರವಾಸೋದ್ಯಮ ವಿಷಯದಲ್ಲಿ ಒಂದು ಬೆಳವಣಿಗೆ ಆಲ್ಲಿ ಆಗುವುದಲ್ಲದೆ ರೆವಿನ್ಯೂ ಕೂಡ ಜಾಸ್ತಿ ಆಗುತ್ತದೆ ಎಂಬ ಒಂದು ಅಭಿಪ್ರಾಯವನ್ನು ಪಟ್ಟಿದ್ದರು. ಅದು ನಿಜವಾಗಿದೆ. ಆದರೆ ಇವೊತ್ತು ಎಲ್ಲೆಲ್ಲಿ ಇಂತಹ ಪ್ರವಾಸಿ ಕೇಂದ್ರಗಳನ್ನು ಮಾಡಿದ್ದೀರಿ ಮತ್ತು ಅಂತಹ ಯೋಜನೆಯನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ಸಿದ್ಧಪಡಿಸಿದ್ದೀರಿ, ಎಂದು ತಿಳಿಸಿಲ್ಲ. ಪ್ರವಾಸೋದ್ಯಮಕ್ಕೆ ಅನುಕೂಲವಾಗುವಂತಹ ಒಂದು ಬ್ಲೂಪ್ರಿಂಟ್ ಚಾರ್ಟರ್‌ನ್ನು ತಯಾರು ಮಾಡಿದ್ದಿರೋ ಇಲ್ಲವೋ ಎಂಬ ಬಗ್ಗೆಯೂ ನಮಗೆ ಗೊತ್ತಿಲ್ಲ.

ಕರ್ನಾಟಕ ರಾಜ್ಯದಲ್ಲಿ ಪ್ರವಾಸೋದ್ಯಮಕ್ಕೆ ಅನುಕೂಲವಾದಂತಹ ಒಂದು ಒಳ್ಳೆಯ ವಾತಾವರಣ ಇದೆ. ಬೇರೆ ಬೇರೆ ರಾಜ್ಯಗಳಿಂದ ಜನರು ಇಲ್ಲಿಗೆ ಬರುತ್ತಾ ಇದ್ದಾರೆ. ವಿದೇಶಗಳಿಂದ ವಿದೇಶಿಯರು ಕೂಡ ಬರುತ್ತಾ ಇದ್ದಾರೆ. ನಮ್ಮ ಬೆಂಗಳೂರು ನಗರ ಈಗ ಒಳ್ಳೆಯ ಹೆಸರನ್ನು ಪಡೆದಿದೆ. ಇದು ಎಲ್ಲರಿಗೂ ಗೊತ್ತಿರುವ ವಿಚಾರ. ಸಾರ್ಕ್ ಸಮ್ಮೇಳನ ಆಯಿತು, ಕಾಮನ್‌ವೆಲ್ತ್ ಸಮ್ಮೇಳನ ಆಯಿತು, ಅನೇಕ ಸಮಿನಾರ್‌ಗಳು ಆದವು ಮತ್ತು ಆಗಲಿವೆ. ಹೀಗೆ ಒಂದು ಅನುಕೂಲಕರವಾದ ವಾತಾವರಣ ಈ ನಮ್ಮ ನಗರಕ್ಕೆ ಇದೆ ಮಾನ್ಯ ಮುಖ್ಯಮಂತ್ರಿಯವರು India International standard ಮಾಡಿ ಪ್ರವಾಸೋದ್ಯಮಕ್ಕೆ ಅನುಕೂಲ ಆಗಲಿ ಎಂದು ಮಾಡುತ್ತಾ ಇದ್ದಾರೆ. ಇದನ್ನೆಲ್ಲಾ ಮಾಡಬೇಕಾದರೆ, ಪ್ರವಾಸೋದ್ಯಮಕ್ಕೆ ಅನುಕೂಲವಾಗಿ ನಮ್ಮ ಟ್ಯಾಕ್ಸೇಶನ್ ಪಾಲಿಸಿ ಇರಬೇಕಾಗುತ್ತದೆ. ನೀವು ಈಗಾಗಲೇ ಹೇಳಿರುವ ಹಾಗೆ, ೫೦೦ ರಿಂದ ೨,೫೦೦ಕ್ಕೆ ಏರಿಸಿ, ಮತ್ತೆ ೨೦೦೦ಕ್ಕೆ ಇಳಿಸಿದ್ದೀರಿ.

ಈ ರೀತಿ ಏಕ್‌ದಂ ಒಂದೇ ಸಲಕ್ಕೆ ಏರಿಸಿರುವುದು ದುರ್ದೈವ. ನಿಮ್ಮ ವಾದ ಏನಿದೆ ಅವರೆಲ್ಲಾ ಸಿಕ್ಕಾಪಟ್ಟೆ ಬಸ್‌ಗಳನ್ನು ಓಡಿಸುತ್ತಿದ್ದಾರೆ, ಒಂದೇ ಪರ್ಮಿಟ್ ಇಟ್ಟುಕೊಂಡು ಚೆನ್ನಾಗಿ ಹಣ ಮಾಡಿಕೊಳ್ಳುತ್ತಿದ್ದಾರೆ ಅವರ ಬಗ್ಗೆ ನಿಮಗೇಕೆ ಕಾಳಜಿ ಎಂದು ಮಾತನಾಡಿಕೊಳ್ಳುವುದನ್ನು ಕೇಳಿದ್ದೇನೆ. ಮೊನ್ನೆ ನಾನು ಇವರು ಹೇಳುವುದರ ಬಗ್ಗೆ ಸ್ವಲ್ಪ ಅಳವಾಗಿ ಅಭ್ಯಾಸ ಮಾಡಿದೆ. ಮೊದಲು ನಾನೂ ಕೂಡ ಅದೇ ಅಭಿಪ್ರಾಯ ಇಟ್ಟುಕೊಂಡಿದ್ದೆ. ನಿಜಾಂಶ ಏನೆಂದರೆ ಸಾಮಾನ್ಯವಾಗಿ ಇಂಥವರು ಯಾವಾಗಲೂ ಪೋಲೀಸರ ಕಣ್ಣಿಗೆ ಬೀಳುತ್ತಿರುತ್ತಾರೆ. ಅವರಲ್ಲಿ ಸ್ಟೇಜ್ ಕ್ಯಾರೇಜ್‌ನವರು, ಟೂರಿಸಂನವರು, ಆಲ್ ಇಂಡಿಯಾ ಟೂರಿಸಂನವರು ಮತ್ತು ಕ್ಯಾಬ್‌ನವರು ಬರುತ್ತಾರೆ. ಉದಾಹರಣೆಗೆ ಇವರು ಕಡೂರಿನಿಂದ ಚಿಕ್ಕಮಗಳೂರು, ಬೀರೂರು ಇವುಗಳ ಮಧ್ಯೆ ಓಡಾಡುತ್ತಿರುತ್ತಾರೆ. ಇವರೆಲ್ಲ ೧೨+೧. ಇವರು ಪೋಲೀಸರಿಗೆ ಆಗಾಗ ಹಣ ಕೊಡುತ್ತಲೇ ಇರಬೇಕು. ಇದು ಮಾಮೂಲು. ನಿಮ್ಮ ಕೈಲಿ ಇದನ್ನೆಲ್ಲ ತಡೆಯುವುದಕ್ಕೆ ಆಗುವುದೂ ಇಲ್ಲ ಬಿಡಿ. ವಿಷಯ ಈ ರೀತಿ ಇರಬೇಕಾದರೆ ಅವರು ಸ್ವಲ್ಪ ದುಡ್ಡು ಮಾಡುತ್ತಾರೆ ಎಂಬುದನ್ನೇ ದೊಡ್ಡದು ಮಾಡಿ ಚೆನ್ನಾದ ಮೊಟ್ಟೆಯಂನ್ನು ಇಡುವ ಕೋಳಿಯನ್ನು ಕೊಲ್ಲುವ ರೀತಿಯಲ್ಲಿ ಮಾಡಿದರೆ ಇದು ನಿಜಕ್ಕೂ ಆಶ್ಚರ್ಯಕರ. ಒಂದನ್ನು ನಾನು ಅಪ್ರಿಷೇಟ್ ಮಾಡುತ್ತೇನೆ. ಸರ್ಕಾರದವರೇ ಅವೆಲ್ಲವನ್ನೂ ವಹಿಸಿಕೊಂಡರೆ ಅದು ಬೇರೆ ಸಮಾಚಾರ ಆಥವಾ ಖಾಸಗಿಯವರಿಗೆ ನಿಮ್ಮ ಕೆ ಎಸ್ ಆರ್ ಟಿ ಸಿ ಯವರು ಟೂರಿಸಂನವರು ಯೋಜನೆ ಮಾಡಿ ಅವರೊಂದಿಗೆ ಕಾಂಪಿಟ್ ಮಾಡಿದ್ದರೆ ಅದೂ ಬೇರೆ ಸಮಾಚಾರ. ಆದರೆ ಇವತ್ತಿನವರೆಗೂ ಹಾಗಾಗಿಲ್ಲ. ಇವುಗಳೆಲ್ಲ ಆಲ್ ಇಂಡಿಯಾ ಪರ್ಮಿಟಾದ್ದರಿಂದ ಕೇಂದ್ರ ಸರ್ಕಾರ ಅದನ್ನು ಕೊಡುತ್ತಿರುವುದು. ಆಥವಾ ಈ ಖಾಸಗಿಯವರದವೆನ್ನುವುದು ಯಾವುದೂ ಇಲ್ಲ ಎಲ್ಲ ಸರ್ಕಾರದ್ದು ಎಂದು ಫೋಷಿಸಿಬಿಡಿ ಅದನ್ನು ಮಾಡಿದರೆ ಈ ಸರ್ಕಾರ ಉಳಿಯುತ್ತದೋ ಇಲ್ಲವೋ ಎಂಬ ಅನುಮಾನ ಬರುತ್ತದೆ. ಏಕೆಂದರೆ, ಅಧ್ಯಕ್ಷರೇ, ಚರಿತ್ರೆ ಏನು ಹೇಳುತ್ತದೆ ಎಂದರೆ ಸರ್ಕಾರ ಎನ್ನುವುದು ಈ ಟ್ರಾನ್ಸ್‌ಪೋರ್ಟ್ ಆಪರೇಟರ್ಸ್‌ಗಳನ್ನು ಟೂರಿಸ್ಟ್ ವೆಹಿಕಲ್ಸ್ ಅನ್ನು ಎಲ್ಲೆಲ್ಲಿ ಟಚ್ ಮಾಡುವುದಕ್ಕೆ ಹೋಗಿದೆಯೋ ಅಂಥಾ ಕಡೆಯೆಲ್ಲಾ ಸರ್ಕಾರಗಳೇ ಉರುಳಿ ಹೋಗಿವೆ. ಚಿಲಿ ಎನ್ನುವ ದೇಶದಲ್ಲಿ ಅಲ್ಲೆಂದ ಎನ್ನುವವರು ಅಧ್ಯಕ್ಷರಾಗಿದ್ದರು. ಅವರೇನು ಕಮ್ಯುನಿಸ್ಟರಲ್ಲ, ಸೋಷಲಿಸ್ಟ್ ರಿಫಾರ್ಮಸನ್ನು ತಂದವರು. ಆ ರೀತಿ ತಂದಾಗ ಟ್ರಾಫಿಕನ್ನು ರಾಷ್ಟ್ರೀಕರಣ ಮಾಡಲು ಹೋದರು. ಅದೂ ಟ್ರಾಫಿಕ್ ಅನ್ನು, ಪ್ಯಾಸೆಂಜರ್ ಟ್ರಾಫಿಕ್ ಅಲ್ಲ. ಆಗ ಎಂಟೈರ್ ಟ್ರಾಫಿಕ್‌ನವರೆಲ್ಲ ಸೇರಿಕೊಂಡು ಅವರಿಗೆ ಅಮೆರಿಕಾದ ಸಿಐಎ ಸಹಾಯ ಮಾಡಿ ಬಾಂಬುಗಳೆನ್ನು ಹಾಕಿ ಕೊನೆಗೆ ಅಧ್ಯಕ್ಷರನ್ನೇ ಕಿತ್ತುಹಾಕಿ ಕೊನೆಗೆ ಅಲ್ಲಿ ಸರ್ವಾಧಿಕಾರ ಮತ್ತೆ ಪಿನೋಚೆಟ್ ಅನ್ನುವವರ ನೇತೃತ್ವದಲ್ಲಿ ಬಂದಿದೆ.

ಅಧ್ಯಕ್ಷರು.—ಮಾನ್ಯ ಬಸವಲಿಂಗಪ್ಪನವರೇ ಇಲ್ಲಿ ಕೇಳಿ. ರೂಲ್ಸ್ ಆಫ್ ಪ್ರೊಸೀಜರ್‌ನಲ್ಲಿ ಏನು ಹೇಳಿದೆ ಎಂದರೆ 'ಒಬ್ಬ ಸದಸ್ಯರು ಮಾತನಾಡುತ್ತಿರುವಾಗ ಇತರೆ ಸದಸ್ಯರು ಗಂಪು ಗೂಡುವುದಾಗಲಿ ಭಂಗತರಂವುದಾಗಲೀ ಮಾಡಬಾರದು' ಎಂದಿದೆ. ಸರ್ಕಾರದ ಮುಖ್ಯ ಸಚೇತಕರು ಆಡಳಿತ ಪಕ್ಷದ ಸದಸ್ಯರ ಶಿಸ್ತಿನ ಬಗ್ಗೆ ಗಮನಹರಿಸಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಅಂತರ ರಾಷ್ಟ್ರೀಕರಣ ಮಾಡುತ್ತೇವೆಂದು ಹೇಳಿ ಮಾಡುವ ದಾರಿ ಬೇರೆ. ಅದು ಆಗುವುದಿಲ್ಲ ಎಂಬುದು ಸರ್ಕಾರಕ್ಕೆ, ಮುಖ್ಯ ಮಂತ್ರಿಗಳಿಗೆ ಎಲ್ಲರಿಗೆ ಗೊತ್ತಿದೆ.

ಅದು ಬಿಟ್ಟು ಸಣ್ಣ ಸಣ್ಣ ಇಂಜೆಕ್ಷನ್ ಕೊಟ್ಟು ರೋಗಿಯನ್ನು ಸಾಯಿಸುವ ಕೆಲಸ ಇವೊತ್ತು ಆಗುತ್ತಿದೆ. ೫೦ ರೂಪಾಯಿ ಇದ್ದದ್ದು ೨೦೦೦ ಮಾಡಿದಿರಿ. ಇನ್ನೊಂದು ಮಾತನ್ನು ಹೇಳಬೇಕಾದರೆ ಈ ವೆಹಿಕಲ್ಸ್, ದಕ್ಷಿಣ ಭಾರತದಲ್ಲಿ, ಅದರಲ್ಲೂ ಕರ್ನಾಟಕದಲ್ಲಿ ಜಾಸ್ತಿ ಇವೆ. ಮೊದಲು ೧೫,೫೦೦ ರೂಪಾಯಿ ಇದ್ದದ್ದನ್ನು ಈಗ ೨,೦೦೦ ಮಾಡಿದರೆ ೭೦ ಸಾವಿರ ಆಗುತ್ತದೆ. ನೀವೇ ಬೇಕಾದರೆ ಲೆಕ್ಕಾಚಾರ ಹಾಕಿ ಸ್ವಾಮಿ. ಜಾಸ್ತಿ ಬಸ್‌ಗಳನ್ನು ಇಟ್ಟುಕೊಂಡಿರುವವರು ಒಬ್ಬರೋ ಇಬ್ಬರೋ ಸಿಗಬಹುದು. ವಿಕಾಸಮಿ ದೃಷ್ಟಿಯಂದ ಇದನ್ನು ನೋಡಿದರೂ ಕೆ ಎಸ್ ಆರ್ ಟಿ ಸಿ ಮತ್ತು ನಿಮ್ಮ ಟೂರಿಸಂ ಬಸ್‌ಗಳಿಗಾಗುತ್ತಿರುವ ವೆಚ್ಚ, ತೆರಿಗೆಗಳನ್ನು ಇವರ ವೆಚ್ಚಗಳಿಗೆ ಹೋಲಿಸಿದರೆ ಹೊಸ ತೆರಿಗೆ ರಾಂಗ್ ಆಗುತ್ತದೆ. ನಾವು ಎರಡು ಮೂರು ಲೆಕ್ಕಾಚಾರಗಳನ್ನು ಹಾಕಿದ್ದೇವೆ. ಅದನ್ನು ತಮ್ಮ ಮುಂದಿಡುವುದಕ್ಕೆ ಬಯಸುತ್ತೇನೆ. ರೇಟ್ಸ್ ಯಾವುದು ಇದೆ ಎಂದರೆ ಮದ್ರಾಸ್ ಬೆಂಗಳೂರು, ಬೆಂಗಳೂರು–ಮದ್ರಾಸ್, ಹೈದರಾಬಾದ್–ಬೆಂಗಳೂರು, ಬೆಂಗಳೂರು–ಹೈದರಾಬಾದ್ ಹಾಗೆಯೇ ಬೆಂಗಳೂರು–ಎರ್ನಾಕುಲಂ, ಎರ್ನಾಕುಲಂ–ಬೆಂಗಳೂರು, ಪಂಜಿಂ–ಬೆಂಗಳೂರು, ಬೆಂಗಳೂರು–ಪಂಜಿಂ, ಬಾಂಬೆ–ಬೆಂಗಳೂರು, ಬೆಂಗಳೂರು–ಬಾಂಬೆ ರೇಟ್ಸ್ ಏನಿದೆ ಇದನ್ನೆಲ್ಲಾ ಇವತ್ತಿನ ದಿವಸ ನೋಡಿದರೆ ಆಪರೇಷನ್ಸ್ ಕಾಸ್ಟ್ ಮತ್ತು ಅರ್ನಿಂಗ್ ಕಾಸ್ಟ್ ಅನ್ನು ಲೆಕ್ಕಾಚಾರ ಹಾಕಿದರೆ ೨೮ ಸೀಟಿಗೆ ಲೆಕ್ಕಾಚಾರ ಹಾಕಿದರೆ ಕಿಲೋ ಮೀಟರ್, ಇನ್ನೂ ಮುಂತಾದವುಗಳ ಬಗ್ಗೆ ವಿವರ ಇಲ್ಲಿ ಇದೆ ಅದನ್ನೆಲ್ಲಾ ನಾನು ಇಲ್ಲಿ ಓದುವುದಕ್ಕೆ ಹೋಗಬವುದಿಲ್ಲ. ತಮಗೇ ಪಾಸ್ ಆನ್ ಮಾಡುತ್ತೇನೆ ನೋಡಿ. ಅರ್ನಿಂಗ್ ಪರ್ ಕಿಲೋ ಮೀಟರ್ ಮದ್ರಾಸ್–ಬೆಂಗಳೂರು ೪.೯೪, ಹೈದರಾಬಾದ್–ಬೆಂಗಳೂರು ೫ ಪಾಂಡಿಚೆರಿ ಟು ಬೆಂಗಳೂರು ೩.೫೮. ಎರ್ನಾಕುಲಂ–ಬೆಂಗಳೂರು ೪.೪೮೦ ಆಗುತ್ತದೆ ಪಂಜಿಂ–ಬೆಂಗಳೂರು ೪.೯೬. ಬೆಂಗಳೂರು–ಬಾಂಬೆ ೬.೭೨, ಇದು ಇವತ್ತಿನ ಕರೆಂಟ್‌ರೇಟ್ ಇರುವುದು. ಏನು ೧೫೦೦ ಇದೆ ಅದರ ಆಧಾರದ ಮೇಲೆ ಮುಂಖ್ಯವಾಗಿ ಪ್ರಶ್ನೆ ಬರುವುದೇನೆಂದರೆ ಇದರಲ್ಲಿ ಆವರ ಖರ್ಚಿಲ್ಲಾ ಕಳೆದರೆ ಕಾಸ್ಟ್ ಪರ್ ಕಿಲೋ ಮೀಟರ್ ಏನು ಆಗುತ್ತದೆಂದರೆ, ಇದರಲ್ಲಿ ಅನೇಕ ಐಟಂಗಳು ಬರುತ್ತವೆ ಡ್ರೈವರ್ ಖರ್ಚು, ಪೆಟ್ರೋಲ್, ಡೀಸೆಲ್ ಖರ್ಚು, ಎಲ್ಲಾ ಬರುತ್ತದೆ, ಅರ್ನಿಂಗ್ ಪರ್ ಕಿಲೋ ಮೀಟರ್‌ಗೆ ಲೆಕ್ಕಾಚಾರ ಹಾಕಿದರೆ ಮದ್ರಾಸ್–ಬೆಂಗಳೂರು ೬.೯ ಈಗ ಇರುವ ರೇಟ್‌ನಲ್ಲಿ, ೪.೮೬ ಹೈದರಾಬಾದ್ ಬೆಂಗಳೂರು, ಪಾಂಡಿಚೆರಿ–ಬೆಂಗಳೂರು ೬.೪೨, ಎರ್ನಾಕುಲಂ–ಬೆಂಗಳೂರು ೫.೧೨, ಪಂಜಿಂ–ಬೆಂಗಳೂರು ೪.೨೯, ಬಾಂಬೆ–ಬೆಂಗಳೂರು ೫.೧೩, ನಿಜವಾಗಿ ನೋಡುವುದಾದರೆ ಮದ್ರಾಸ್–ಬೆಂಗಳೂರು ಲಾಸ್ ಆಗಿದೆ ಮೈನಸ್ ೯೮ ಆಯಿತು, ಹೈದರಾಬಾದ್ ಬೆಂಗಳೂರಿನಲ್ಲಿ ಪ್ರಾಫಿಟ್ ಆಗಂತ್ತದೆ ಪ್ಲಸ್ ೧.೪, ಪಾಂಡಿಚೆರಿ–ಬೆಂಗಳೂರು ಮೈನಸ್ ೨.೮೪, ಎರ್ನಾಕುಲಂ ಬೆಂಗಳೂರು ಮೈನಸ್ ೦.೬೩, ಪಂಜಿಂ ಬೆಂಗಳೂರು ಪ್ಲಸ್ ೦.೬ ಬಾಂಬೆ ಬೆಂಗಳೂರು ಪ್ಲಸ್ ೧.೬೯ So earnings as far as Pondicherry, Madras, Eraculam is concerned it is very little. ಇದರ ಮೇಲೆ ಇವತ್ತು ಏನು ತೆರಿಗೆಯನ್ನು ಹೊರಿಸಬೇಕಾಗುತ್ತದೆಂದು ಹೇಳುತ್ತಿದ್ದೀರಿ, ಎರಡು ಸಾವಿರ ಮಾಡಬೇಕೆಂದು ಏನು ಹೇಳುತ್ತಿದ್ದೀರಿ, ಎರಡು ಸಾವಿರ ಮಾಡಿದರೆ ಪರಿಸ್ಥಿತಿ ಏನಾಗಂತ್ತದೆ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ ನಾನು ೨೫೧೦೦ಕ್ಕೆ ವರ್ಕ್ ಔಟ್ ಮಾಡಿದೆ ಇದರ ಆಧಾರದ ಮೇಲೆ ಮಾಡಿದರೆ ತೀರಾ ಕಂಪ್ಲೀಟಾಗಿ ಲಾಸ್ ಆಗುತ್ತದೆ, ಎರಡು ಸಾವಿರ ಮಾಡಿದರೂ ಲಾಸ್ ಆಗುತ್ತದೆ. ಇದರಿಂದ ಏನಾಗುತ್ತದೆ ಎಂದರೆ ಯಾವುದೂ ಉಳಿಯಬವ ಹಾಗೇ ಇಲ್ಲ ಪರಿಸ್ಥಿತಿ ಇನ್ನೂ ಬಿಗಡಾಯಿಸುತ್ತದೆ ಭಾರ ಕಡಿಮೆಯಾಗುವಂತೆ ಕಾಣುವುದಿಲ್ಲ ಅನೇಕರು ತಮ್ಮ ವಾಹನಗಳನ್ನೆ ಮಾರತಕ್ಕಂತಹ ಪರಿಸ್ಥಿತಿ ಬರುತ್ತದೆ ನಂತರ ತಮ್ಮ ಹತ್ತಿರ ಸಹ ಯೋಚನೆಗೆ ಆಥವಾ ಇನ್ನು ಏತಕ್ಕೋ ಬರುತ್ತಾರೆ ಏತಕ್ಕೆ ಬರುತ್ತಾರೋ ನನಗಂತೂ ಗೊತ್ತಿಲ್ಲ. ಮೋಟಾರ್ ವೆಹಿಕಲ್ ಟ್ಯಾಕ್ಸ್ ಏನಾಗುತ್ತದೆ ಎಂಬುದರ ಬಗ್ಗೆ ಕೂಡ ನಾನು ಹೇಳಬೇಕಾಗುತ್ತದೆ. ಮೋಟಾರ್ ವೆಹಿಕಲ್ ಟ್ಯಾಕ್ಸ್ ಅನ್ನು ಈಗ ಎರಡು ಸಾವಿರ ಮಾಡಿದ್ದೀರಿ ಎರಡು ಸಾವಿರ ಮಾಡಿದರೂ ಕೂಡ ಅವರು ಮದ್ರಾಸ್–ಬೆಂಗಳೂರಿನಿಂದ ಮದ್ರಾಸ್‌ಗೆ ಹೋದರೆ ಅಲ್ಲಿಯದೂ ಕೂಡ ತೆರಿಗೆಯನ್ನು ಕೊಡಬೇಕಾಗುತ್ತದೆ. ಮದ್ರಾಸ್–ಬೆಂಗಳೂರು ಕರೆಟ್ ರೇಟ್ ಪ್ರಕಾರ ತಮಿಳುನಾಡು ೨೮,೦೦೦, ಕರ್ನಾಟಕ ೭೦,೦೦೦ ಒಟ್ಟು ೯೮,೦೦೦, ಆಗುತ್ತದೆ. ಹೈದರಾಬಾದ್–ಬೆಂಗಳೂರು ಆಂಧ್ರ ೪೮,೩೦೦ ಕರ್ನಾಟಕ ೧,೦೯,೩೦೦, ಪಾಂಡಿಚೆರಿ–ಬೆಂಗಳೂರು ೨೫,೨೦೦ ಪ್ಲಸ್ ತಮಿಳುನಾಡು ೨೮,೦೨೦, ಪ್ಲಸ್ ಕರ್ನಾಟಕ ೭೨,೦೦೦ ಒಟ್ಟು ೧,೨೩,೨೦೦, ಎರ್ನಾಕುಲಂ–ಬೆಂಗಳೂರು ಕೇರಳ ೩೦,೮೦೦,

ತಮಿಳುನಾಡಂ ೨೮,೦೦೦ ಕರ್ನಾಟಕ ೭೦,೦೦೦ ಒಟ್ಟು ೧,೨೮,೮೦೦ ಪಂಜಿಂ–ಬೆಂಗಳೂರು ಗೋವಾ ೪,೨೦೦, ಕರ್ನಾಟಕ ೭೦,೨೦೦, ಬಾಂಬೆ–ಬೆಂಗಳೂರು ಮಹಾರಾಷ್ಟ್ರ ೮೮,೨೨೪, ಕರ್ನಾಟಕ ೭೦,೦೦೦ ಒಟ್ಟು ೧,೫೮,೨೨೪ ಕರೆಟ್ ರೇಟಿನಲ್ಲಿ ಇಷ್ಟೊಂದು ಕೊಟ್ಟು ಪ್ಲಸ್ ಅದರ ಮೇಲೆ ಟ್ಯಾಕ್ಸ್ ಕೊಟ್ಟರೆ it will be unconscienable high, ಇದರಿಂದ ಏನಾಗುತ್ತದೋ ನನಗಂತೂ ಗೊತ್ತಿಲ್ಲ. Calculation of Motor Vehicles Tax has been terrible. The goose may not be laying a golden egg. The goose may be laying a golden egg for some people. But anyway you will be killing the golden goose.

ಈ ಡಿಪ್ರಿಸಿಯೇಷನ್ ಛಾರ್ಜ್, ಸರ್ವಿಸ್ ರೇರ್ಟ್ಸ್, ರಿಪೇರಿ ಛಾರ್ಜಸ್ ಇದೆಲ್ಲಾ ಲೆಕ್ಕ ಮಾಡಿದರೆ ಆಗ ಬಹಳ ಹೋಗುತ್ತದೆ ಎಂದು ನನ್ನ ಅಭಿಪ್ರಾಯ. ಒಂದು ವಿಷಯವನ್ನು ನಮ್ಮ ಮಿತ್ರರೊಬ್ಬರು ಹೇಳಿದರು. This only compensatory...'It should not be punitive, it should not be fine.' I am drewing your attention to page 382 para 17 of Supreme Court cases 1975 (1). ನಾನೂ ಕೂಡಾ ಅದನ್ನು ನೋಡುತ್ತಿದ್ದೇನೆ. ಸುಪ್ರೀಂ ಕೋರ್ಟ್ ಡಿಸಿಷನ್ ಬಗ್ಗೆ ಮಾತನಾಡಿದ್ದೆ. In page 382 ಸುಪ್ರೀಂ ಕೋರ್ಟ್ ಡಿಸಿಷನ್ ಏನು ಹೇಳುತ್ತದೆ ಎಂದರೆ.

> " But because the users of vehicles generally, and of public moter vehicles in particular, stand in a special and direct relation to such roaes and may be said to derive a special and direct benefit from them, it seems not unreasonable that they should be called upon to make a special contribution to their maintenance over and above their general contribution as tax–payers of the State. If however a charge is imposed, not for the purpose of obtain ing a proper contribution to the maintenance and upkeep of the road, but for the purpose of adveriely affecting trade or commerce, then it would be a restriction of trade commerce and intercourse."

ಇದನ್ನು ನಾನು ತಿಳಿದುಕೊಂಡಿರುವುದು ಏನೆಂದರೆ :

If tax is imposed in the manner in which it is imposed, it will not only become compensatory, it will not be punitive, it will be a restriction of trade, commerce and intareourse. That is why it should be looked into a serious matter. ಯಾರೋ ಏನೋ ಹೇಳುತ್ತಾರೆ. ಯಾರೋ ಮಾಡಿದರು ಎಂದು ಇಲ್ಲಿ ಇದನ್ನು ನಾವು ಮಾಡಬೇಕು ಎಂದು ಮಾಡಿದರೆ ಇದು ಸರಿಯಾಗಿರುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ತಮ್ಮನ್ನು ಕೇಳಿಕೊಳ್ಳುವುದು ಏನೆಂದರೆ ಸ್ವಲ್ಪಮಟ್ಟಿಗೆ ಇದನ್ನು ಪುನರ್ ವಿಮರ್ಶೆ ಮಾಡಬೇಕು. ಇನ್ನೊಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ೧೯೮೪ ರಿಂದಲೂ, ತಾವು ಬಂದಾಗಿನಿಂದಲೂ ೧೨ ೬೦೦ ಇತ್ತು ಪರ್ ಕ್ವಾರ್ಟರ್, ಆಮೇಲೆ ೧೩,೮೦೦ ಆಯಿತು, ೧೪ ಸಾವಿರ ಆಯಿತು, ೧೭ ಸಾವಿರ ಆಯಿತು ಪರ್ ಕ್ವಾರ್ಟರ್, ೮೭ ಸಾವಿರ ಆಯಿತು ಅಥವಾ ೭೦ ಸಾವಿರ ಆಗಿದೆ. ಯಾವ ರೀತಿಯಲ್ಲಿ ಜಂಪ್ ಆಗಿದೆ ಎನ್ನುವುದನ್ನು ತಾವು ನೋಡಿ. ಇದಕ್ಕೆ ವ್ಯಾಲಿಡ್ ಎಕ್ಸ್‌ಪ್ಲನೇಷನ್ ಇರಬೇಕು. Rational explanation ಇರಬೇಕು. ೮೭ ಸಾವಿರ ಇದ್ದಿದ್ದು ೭೦ ಸಾವಿರ ಮಾಡಿದ್ದೀರಿ. ಏತಕ್ಕೆ ಜಾಸ್ತಿ ಆಯಿತು ? ಅವರು ಕೋಟ್ಯಾಧಿಪತಿಗಳು ಆಗಿದ್ದರೆ ಅದನ್ನು ಹೇಳಿ. ಅವರು ಕೋಟ್ಯಾಧಿಪತಿಗಳು

ಆಗಿದ್ದಾರೆ. ಅವರಿಗೆ ಕೊಡುವ ಶಕ್ತಿ ಇದೆ ಎಂದು ಹೇಳಿ, ಇದು ವಾಸ್ತವಾಂಶಕ್ಕೆ ವಿರುದ್ಧ ವಾದುದು. ಒಂದು ಬಸ್‌ನ್ನು ಓಡಿಸುವವರು, ಎರಡು ಬಸ್‌ಗಳನ್ನು ಓಡಿಸುವವರು ಇದ್ದಾರೆ. ಅವರಂಗಳು ಈ ಮಾರ್ವಾಡಿಗಳ ಹತ್ತಿರ, ಸಾಲ ಕೊಡುವವರ ಹತ್ತಿರ ಹದಿನೆಂಟೂವರೆಯಂತೆ ಬಡ್ಡಿ ಕೊಟ್ಟು ಸಾಲವನ್ನು ತಂದಿರುತ್ತಾರೆ. ಈ ರೇಟ್‌ನಲ್ಲಿ ಮಾಡಬೇಕು ಎಂದು ಹೇಳಿದರೆ ಇದೂ ಖಂಡಿತಾ ನಡೆಯುವುದಿಲ್ಲ. ಆದ್ದರಿಂದ ತಮ್ಮಲ್ಲಿ ಮತ್ತೊಮ್ಮೆ ಕೇಳಿಕೊಳ್ಳುವುದೇನೆಂದರೆ ಇದನ್ನು ಪುನರ್ ಪರಿಶೀಲನೆ ಮಾಡಬೇಕು. ಅಧ್ಯಕ್ಷರೇ ಇನ್ನೊಂದು ವಿಷಯವನ್ನು ತಮ್ಮಲ್ಲಿ ಹೇಳಿ ಬಿಡುತ್ತೇನೆ. ನಾನು ಇದಕ್ಕೆ ಅಮೆಂಡ್‌ಮೆಂಟ್ ಕೊಟ್ಟಿದ್ದೇನೆ.

" 2) In Part–B (i) In item 4–

a) in sub item 2) after the words and figure " 100 Kms per day " the words and figures " other than those mentioned in sub item 2A)" shall be inserted :

b) After sub (item 2), the following sub item shall be inserted namely :—

" (2–A) Vehicles permitted to carry more than tweleve persons and the total distance covered be such vehicles does not exceed 100 Kms per day in the incerstaty routes–

For every passenger (other that the driver and the conductor) which the vehicles are permitted to carry–62.50 125.00 ".

62.50 ಇತ್ತು. ಇದು ಈಗ ೧೨೫ ಆಗಿದೆ. ಈಗ ಡಬಲ್ ಆಗಿದೆ, ಇದನ್ನು ಯಾರಿಗೆ ಮಾಡಿದ್ದೀರಿ ? ಇದರ ಬಗ್ಗೆ ರಿಯಾಯತಿಯನ್ನು ತೋರಿಸಿಲ್ಲ. ಈ ಮೆಟಡಾರ್ ವ್ಯಾನ್‌ನವರ ವಿಷಯ ತಮಗೆ ಗೊತ್ತಿದೆ. ಮಂತ್ರಿಗಳಿಗೂ ಗೊತ್ತಿದೆ. ಎರಡು ತರಹ ಮೆಟಡಾರ್ ವ್ಯಾನ್‌ನವರು ಇದ್ದಾರೆ, ಒಂದು ರಾಜ್ಯದ ಒಳಗೆ ಹೋಗತಕ್ಕಂಥವರು, ಇನ್ನೊಬ್ಬರು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಹೋಗುವವರು. ಇಂಟರ್ ಸ್ಟೇಟ್‌ನವರಿಗೆ ಏನೂ ಅವಕಾಶ ಇಲ್ಲ. ಅವರಿಗೆ ಬದುಕುವುದಕ್ಕೇ ಆಗುವುದಿಲ್ಲ. ಇಂಟರ್ ಸ್ಟೇಟ್ ಮಾಡಿ ಕೊಟ್ಟಿದ್ದೀರಿ. ಅವರಿಗೆ ಪರ್ಮಿಷನ್ ಕೊಟ್ಟಿದ್ದೀರಿ. ಇದನ್ನು ಜಾಸ್ತಿ ಮಾಡಿಬಿಟ್ಟರೆ ಅವರು ಬದುಕುವುದಕ್ಕೇ ಸಾಧ್ಯವೇ ? ಮೊದಲು ೧೩ ಪರ್‌ಸೆಂಟ್ ಮಾಡಿ ಎಂದು ಹೇಳಿದರು. ಏನೋ ತೊಂದರೆ ಆಯಿತು, ಕಾಂಪ್ರೊಮೈಸ ಮಾಡಿಕೊಂಡಿದ್ದೀರಿ, ಇದರ ಬಗ್ಗೆ ಸ್ಟೈಕ್, ಮೆರವಣಿಗೆ ಎಲ್ಲಾ ಮಾಡಿದ್ದರು. ಇಷ್ಟೊಂದು ಜಾಸ್ತಿ ಮಾಡಿದರೆ ಬಹಳ ಕಷ್ಟವಾಗುತ್ತದೆ. ಇವರೆಲ್ಲಾ ಯಾರು ? ಅನೇಕ ಜನ ಇದರಲ್ಲಿ ಗ್ರಾಜುಯೇಟ್ಸ್‌ಗಳು ಇದ್ದಾರೆ. ಯಾರಿಗೆ ಕೆಲಸ ಸಿಗುವುದಿಲ್ಲವೋ ಅವರು ಸೆಲ್ಫ್ ಎಂಪ್ಲಾಯಿಮೆಂಟ್ ಗೋಸ್ಕರ ಇದನ್ನು ಮಾಡಬೇಕು ಎಂದು ಸರ್ಕಾರ ತೀರ್ಮಾನ ಮಾಡಿರುವುದು. ಕೇಂದ್ರಸರ್ಕಾರದವರು ಸಹಾ ಅಂಥವರಿಗೆ ಸಹಾಯ ಮಾಡಬೇಕು, ಮೆಟಡಾರ್ ವ್ಯಾನ್‌ನ್ನು, ಸ್ಟಾಂಡರ್ಡ್ ವ್ಯಾನ್‌ಗಳನ್ನು ಕೊಂಡುಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟು ಸಾಲಗಳನ್ನು ಕೊಡಬೇಕು ಎಂದು ಬ್ಯಾಂಕುಗಳ ಮೂಲಕ, ಫೈನಾನ್ಸಿಯಲ್ ಇನ್‌ಸ್ಟಿಟ್ಯೂಷನ್‌ಗಳ ಮೂಲಕ ಅವರಿಗೆ ಸಾಲವನ್ನು ಕೊಟ್ಟು ಅವರುಗಳು ತಮ್ಮ ಕಾಲಮೇಲೆ ತಾವು ನಿಲ್ಲುವಂತೆ ಮಾಡಿದ್ದಾರೆ. ಒಳ್ಳೆಯ ಉದ್ದೇಶದಿಂದ ಈ ಸ್ಕೀಮನ್ನು ಮಾಡಿದ್ದಾರೆ. ಇದು ಒಳ್ಳೆಯ ಯೋಜನೆ.

ಯೋಜನೆಗೆ ಧಕ್ಕೆ ಬರುವಂತಹ ರೀತಿ ನಿಮ್ಮ ಟ್ಯಾಕ್ಸ್‌ಗಳಿವೆ. ಈ ರೀತಿ ಯೋಜನೆ ಮಾಡುವುದರಿಂದ ಸಾಲ ತೀರಿಸುವುದಕ್ಕೆ ಆಗುವುದಿಲ್ಲ. ಬಡ್ಡಿ ತೀರಿಸುವುದಕ್ಕೆ ಆಗುವುದಿಲ್ಲ. ಅವರು ಬೀದಿಪಾಲು ಆಗುತ್ತಿದ್ದಾರೆ. They are persons who wanted to be self–employed and educated, and graduates. ಇದರಿಂದ ರಾಜ್ಯದಲ್ಲಿ ಆಶಾಂತಿಗೆ ಅವಕಾಶ ಮಾಡಿಕೊಡುತ್ತಿದ್ದೀರಿ ಯಾರಿಗೂ ಸುಖ ಇಲ್ಲ. ಅರಾಜಕತೆಗೆ ಅವಕಾಶ ಕೊಡುತ್ತೀರಿ,

ದೇಶಕ್ಕೆ ನೆಮ್ಮದಿ ಇಲ್ಲ. ಇದು ನೀವು ಕೊಟ್ಟಿರತಕ್ಕ ಭರವಸೆಗಳಿಗೆ ವಿರುದ್ಧವಾಗಿದೆ. ಕೇಂದ್ರ ಸರ್ಕಾರದ ನೀತಿಗೆ ವಿರುದ್ಧವಾಗಿದೆ, ಇದನ್ನು ಪುನರ್‌ಪರಿಶೀಲನೆ ಮಾಡಬೇಕೆಂದು ಕೋರುತ್ತೇನೆ. ನೀವು ೬೨ ರೂಪಾಯಿನಿಂದ ೧೨೫ ರೂಪಾಯಿಗಳಿಗೆ ಅಥವಾ ೫ ನೂರರಿಂದ ೨ ಸಾವಿರ ರೂಪಾಯಿಗೆ ಜಾಸ್ತಿ ಮಾಡಿದ್ದೀರಿ, ೨೫ ಪರ್‌ಸೆಂಟ್ ಜಾಸ್ತಿ ಮಾಡಿದ್ದಾರೆ. ಈ ಬಗ್ಗೆ ಸೂಚನೆಯನ್ನು ಕೊಟ್ಟಿದ್ದೇನು ? ನಾವೇನೂ ಅನ್ನುವುದಿಲ್ಲ. ನಾವು ಇದನ್ನು ಕಡಿಮೆ ಮಾಡಿ ಎಂದೂ ಹೇಳಿದರು ಸಹ ಯಾವ ಸರ್ಕಾರ ಕೂಡ ಮಾಡುವುದಿಲ್ಲ. ನೀವು ಇನ್ನು ಜಾಸ್ತಿ ಮಾಡಬೇಡಿ. ಅದರ ಆಧಾರದ ಮೇಲೆ ೫೦ ರಿಂದ ೬೨೫ಕ್ಕೆ ಜಾಸ್ತಿ ಮಾಡಿ. ೨೫ ಪರ್ಸೆಂಟ್ ಜಾಸ್ತಿ ಮಾಡಿ ಎಂದು ನಾನು ನಮ್ಮ ಸೂಚನೆ ಕೊಟ್ಟಿದ್ದೇನೆ. ಅದನ್ನು ತಾವು ಒಪ್ಪಿಕೊಳ್ಳುತ್ತೀರಿ ಎಂದು ಭಾವಿಸುತ್ತೇನೆ. ಇದನ್ನು ಒಪ್ಪಿಕೊಳ್ಳಬೇಕೆಂದು ತಮ್ಮ ಮುಖಾಂತರ ಕೇಳಿಕೊಂಡು ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದನೆಗಳನ್ನರ್ಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೆ, ಲಾರಿಗಳಿಗೆ ಮೂರು ನೂರು ಜಾಸ್ತಿ ಮಾಡಿದ್ದಾರೆ. ಕ್ಯಾಬ್ಸಿಗೆ ೫ ನೂರು ಪರ್ಸೆಂಟ್ ಜಾಸ್ತಿ ಮಾಡಿದ್ದಾರೆ. ೨೨೦ ಇದ್ದದನ್ನು ೧೧೦೦ ರೂಪಾಯಿ ಮಾಡಿದ್ದಾರೆ. ಇದು ತುಂಬಾ ಅನ್ಯಾಯ. ಇಂಟರ್‌ಸ್ಟೇಟ್ ರೂಟ್‌ಗೆ ಒಂದು ಸೀಟ್‌ಗೆ ೫೦ ರೂಪಾಯಿ ಜಾಸ್ತಿ ಮಾಡಿದ್ದಾರೆ. ಟೂರಿಸ್ಟ್ ಬಸ್‌ಗೂ ಸಹ ೪೦೦ ಜಾಸ್ತಿ ಮಾಡಿದ್ದಾರೆ. ಇದು ನಿಜವಾಗಿಯೂ ಕೂಡ ತುಂಬಾ ಅನ್ಯಾಯ. ನಮ್ಮ ಕೃಷ್ಣನ್ ಹೇಳಿದಹಾಗೆ, ಇದೂ ತುಂಬಾ ಜಾಸ್ತಿಯಾಗುತ್ತದೆ. ಮಾನ್ಯ ವೀರಣ್ಣನವರಿಗೆ ಉಳಿತಾಯದ ಬಗ್ಗೆ ಚೆನ್ನಾಗಿ ಗೊತ್ತು. ತಾವುಈ ರೀತಿ ಜಾಸ್ತಿಮಾಡುವಾಗ ಸ್ವಲ್ಪ ಯೋಚನೆಮಾಡಬೇಕು, ಇದು ರ್ಯಾಷನಲ್ ಆಗಿ ಇರಬೇಕು. ಇದಕ್ಕೆ ಒಂದು ಬೇಸಿಸ್ ಇರಬೇಕು, ಆ ರೀತಿ ಇದ್ದಿದ್ದರೆ ಆಗ ನಾನು ವಿರೋಧ ಮಾಡುತ್ತಾ ಇರಲಿಲ್ಲ. ೮೦, ೧೫೦೦ ಜಾಸ್ತಿ ಏನು ಮಾಡಿದ್ದಾರೆ ಅದೂ ತುಂಬಾ ಅನ್ಯಾಯ ಯಾವ ಯೋಚನೆ ಮೇಲೆ ಇಷ್ಟು ಜಾಸ್ತಿ ಮಾಡಿದ್ದಾರೋ ಅದು ಗೊತ್ತಾಗುತ್ತಿಲ್ಲ. ಇವತ್ತಿನ ದಿವಸ ಟ್ಯೂರಿಸ್ಟ್ ಬಸ್‌ನ್ನು ನೋಡಿದರೆ ಅದರ ಬೆಲೆ ೩.೫ ಲಕ್ಷವಾಗಿದ್ದರೆ ೩ ಲಕ್ಷ ಸಾಲದಲ್ಲಿರುತ್ತದೆ. ಬಸ್ಸಿನ ಮೇಲೆ ಇದು ವೈಶ್ಯ ಬ್ಯಾಂಕ್ ಒತ್ತೆಯಾಗಿದೆ. ಸ್ಟೇಟ್ ಬ್ಯಾಂಕ್ ಒತ್ತೆಯಾಗಿದೆ ಎಂದು ನಮೂದಿಸಿರಲಾಗಿರುತ್ತದೆ. Pledged to State Bank of India,

ಒಬ್ಬ ಮಾನ್ಯ ಸದಸ್ಯರು.—ಶ್ರೀ ಆರ್ ವೆಂಕಟರಾಮಯ್ಯನವರ ಹತ್ತಿರ ಬಸ್‌ಗಳು ಇರುವುದರಿಂದ ಇದನ್ನು ವಿರೋಧ ಮಾಡುತ್ತಿದ್ದಾರೆ.

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೆ, ಅಲ್ಲೊಂದೂ ಅಪಾಯಕಾರಿ ಗುಂಪು ಸೇರಿದೆ. ನಮ್ಮ ಊರಿನ ರಮೇಶ್‌ಕುಮಾರ್ ಹಾಗೂ ನನ್ನ ಸಹಪಾಠಿ ಶ್ರೀನಿವಾಸಯ್ಯ ಅವರು ಇದ್ದಾರೆ. ಅವರನ್ನು ಬೇರೆ ಬೇರೆ ಮಾಡಬೇಕು. ಅವರಿಗೆಲ್ಲಾ ಬೇರೆಯವರನ್ನು ರೇಗಿಸುವುದೇ ಕೆಲಸ.

ಸನ್ಮಾನ್ಯ ಅಧ್ಯಕ್ಷರೇ ಇದನ್ನು ಯೋಚನೆ ಮಾಡಬೇಕಾದರೆ ನಾವು ಸುಮಾರು ೩೦ ಇನ್‌ಸ್ಟಾಲ್‌ಮೆಂಟ್‌ಗಳನ್ನು ಕೊಟ್ಟರು ಸಹ ಒಬ್ಬ ೮-೧೦ ಸಾವಿರ ರೂಪಾಯಿಗಳನ್ನು ತಿಂಗಳಿಗೆ ಕೊಡಬೇಕಾಗಿದೆ. ೬ದಿ ಹೋದರೆ ಒಂದು ದಿವಸ ಬರುತ್ತಾನೆ, ಬಸ್‌ನ್ನು ಎತ್ತಿಕೊಂಡು ಹೋಗಿಬಿಡುತ್ತಾನೆ. ಆದ್ದರಿಂದ ಇಂತಹ ಒಂದು ಪರಿಸ್ಥಿತಿಯಲ್ಲಿ ನೀವು ಇಷ್ಟೊಂದು ರೈಸ್ ಮಾಡಬಾರದಾಗಿತ್ತು. ನಿಜವಾಗಿಯೂ ರೇಟ್ಸ್‌ನ ರೈಸ್ ಮಾಡಬೇಕೆಂದು ನಿಮಗೆ ಆಸೆ ಇದ್ದಿದ್ದರೆ ೧೫ ಪರ್ಸೆಂಟ್ ಟು ೨೦ ಪರ್ಸೆಂಟ್ ಮಾಡಿದ್ದರೂ ಅವರು ಪ್ರಪೊರ್‌ಷನೇಟ್ ಆಗಿ ಸ್ವಲ್ಪ ಜಾಸ್ತಿ ಮಾಡುತ್ತಿದ್ದರು. ಈಗ ಅವರು ಏನಾದರೂ ರೈಸ್ ಮಾಡದರೆ ಅದು ಏರೋಪ್ಲೈನ್ ಚಾರ್ಜ್‌ಗೆ ಸಮವಾಗುತ್ತದೆ. ಆದ್ದರಿಂದ ಈ ಏರೋಪ್ಲೈನ್ ಚಾರ್ಜನ್ನು ಹಾಕುವುದಕ್ಕೆ ಆಗುವುದಿಲ್ಲ, ಆದ್ದರಿಂದ ಇದು ಸರಿಯಾಗುವುದಿಲ್ಲ. ಈಗ ಬೇಕಾದರೆ ಇದನ್ನು ಪೆರಿಫೈ ಮಾಡಬಹುದು. ಈಗ ಯಾರಾದರೂ ೫೦ ಬಸ್ ಸರೆಂಡ್ ಮಾಡಿರಂತ್ತಾರೆ. ಅವರು ಟ್ಯಾಕ್ಸ್ ಕೊಟ್ಟಿರುವುದಿಲ್ಲ, ಆದ್ದರಿಂದ ಸರೆಂಡರ್ ಮಾಡಿ ಬಿಟ್ಟು ಹೋಗಿದೆ. ಇದನ್ನು ನಾವು ಹಾಕಿದ್ದೆ ಆದರೆ, ಈ ಬಸ್ಸ್‌ಗಳೆಲ್ಲಾ ಆಂಧ್ರ ಅಥವಾ ಬೇರೆ ರಾಜ್ಯಗಳಿಗೆ ಹೋಗಿ ಬಿಡುತ್ತವೆ, ಹೀಗಾಗಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಬಸ್ ಯಾವುದೂ ಇರುವುದಿಲ್ಲ. ಈಗ ತಾನೇ ನಮ್ಮ ಸ್ನೇಹಿತರೊಬ್ಬರು ಹೇಳಿದ ಹಾಗೆ ಒಳ್ಳೆಯ ಕೊಳಿ ಎಷ್ಟು ದಿವಸ ಬಂಗಾರದ ಮೊಟ್ಟೆಯನ್ನು ಇಡುತ್ತೆ ತಂದ್ರಿ, ಅದನ್ನು ಒಂದೇ ಸಾರಿ ಕೊಂದು ಬಿಟ್ಟರೆ ಇಂಡಸ್ಟ್ರೀಸ್ ಹಾಳಾಗುತ್ತದೆ, ಜೊತೆಗೆ ಬಸ್

ಗಳು ಇನ್ನೊಂದು ಕಡೆಗೆ ಹೋಗುವುದಿಲ್ಲ. ಈಗ ಈ ಟೂರಿಸ್ಟ್ ಬಸ್ಸ್‌ಗಳ ಮೇಲೆ ಹಾಕಿರತಕ್ಕಂತಹ ಒಂದು ತೆರಿಗೆ ಏನು ಇದೆ ಇದನ್ನು ಯಾವ ಬೆಸಿಸ್ ಮೇಲೆ ಹಾಕಿದ್ದೀರಿ ಎಂದು ಕೇಳುತ್ತೇನೆ ? ಇದನ್ನು ಸ್ವಲ್ಪ ಪುನರ್ ಪರಿಶೀಲನೆ ಮಾಡಿ ನಮ್ಮ ವೀರಣ್ಣನವರು ೨,೫೦೦ ರೂಪಾಯಿಗಳು ಇದ್ದಿದ್ದನ್ನು ೨೦೦೦ ಸಾವಿರಕ್ಕೆ ಇಳಿಸಿ ಕೇವಲ ೫೦೦ ರೂಪಾಯಿಗಳನ್ನು ಮಾತ್ರ ಇಳಿಸಿದ್ದಾರೆ. ಇದು ಬಹಳ ಅನ್ಯಾಯ. ಹೀಗೆಯೇ ಲಾರಿಗಳ ಮೇಲೆಯೂ ಸಹ ೨೦೦ ರೂಪಾಯಿ ಹಾಕಿದ್ದನ್ನು ೧೦೦ ರೂಪಾಯಿಗೆ ಇಳಿಸಿದ್ದೀರಿ. ಆದರೆ ನೀವು ಇಂಟರ್ ಸ್ಟೇಟ್ ಬಸಸ್ ಮೇಲೆ ಏನೂ ಇಳಿಸಿಲ್ಲ. ಜೊತೆಗೆ ಈ ಕ್ಯಾಬ್ಸ್ ಖರ್ಚನ್ನು ೫೦೦ ಪರ್ಸೆಂಟ್ ಆಷ್ಟು ಜಾಸ್ತಿ ಮಾಡಿದ್ದೀರಿ. ಆದರಲ್ಲಿ ಏನು ಇದೆ ಅಂದರೆ. "Permitted to carry eleven person or more (excluding the driver) for every person which the vehicle is permitted to carry." ಈಗ ೨೦೦ ರೂಪಾಯಿ ಇದ್ದಿದ್ದನ್ನು ೧೦೦ ರೂಪಾಯಿಗೆ ಮಾಡಿದ್ದೀರಿ ನಿಜವಾಗಿಯೂ ಇದಕ್ಕೆ ಯಾವ ರ್ಯಾಷನಲ ಇಲ್ಲ, ಯಾವ ಬೆಸಿಸ್ ಇಲ್ಲ. ಆದ್ದರಿಂದ ಇದನ್ನೆ ದಯಮಾಡಿ ತಾವು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಏಕೆಂದರೆ ಇದನ್ನು ವಾಪಸ್ಸು ತೆಗೆದುಕೊಂಡರೆ ನಮ್ಮ ಸ್ನೇಹಿತರು ಹೇಳಿದ ಹಾಗೆ ಟೂರಿಸಂ ಡೆವಲೆಪ್‌ಮೆಂಟ್‌ಗೆ ಅನುಕೂಲವಾಗುತ್ತದೆ ಜೊತೆಗೆ ತಕ್ಷಣ ಇದರ ಬಗ್ಗೆ ಪುನಃ ಪರಿಶೀಲನೆ ಮಾಡಿ ಅವರಿಗೆ ಸಹಾಯ ಮಾಡಬೇಕೆಂದು ಹೇಳಿ ಅವರಿಗೆ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ವೀರಣ್ಣ (ಸಾರಿಗೆ ಮತ್ತು ಸಣ್ಣ ಉಳಿತಾಯ ಸಚಿವರು).— ಮಾನ್ಯ ಅಧ್ಯಕ್ಷರೇ, ಎಲ್ಲಾ ಶಾಸಕರ ಹಾಗೂ ಸ್ನೇಹಿತರ ಆಸಕ್ತಿ ಈ ಟೂರಿಸಮ್ ಮೇಲೆ ಬಹಳ ಇದೆ. ಏಕೆಂದರೆ ಈ ಟೂರಿಸ್ಟ್ ಬಸ್ಸ್‌ಗಳ ಮೇಲೆ ಜಾಸ್ತಿ ತೆರಿಗೆ ಹಾಕಿರುವ ಬಗ್ಗೆ ಅವರೆಲ್ಲರೂ ಸಾಕಷ್ಟು ಮಾತನಾಡಿದ್ದಾರೆ. ಆದ್ದರಿಂದ ಈ ಸಂದರ್ಭದಲ್ಲಿ ಒಂದು ವಿಷಯವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಲಿಚ್ಛಿಪಡುತ್ತೇನೆ. ಕರ್ನಾಟಕದಲ್ಲಿ ಆಲ್ ಇಂಡಿಯಾ ಪರಮಿಟ್ ಇರುವ ಬಸ್ಸ್‌ಗಳ ಸಂಖ್ಯೆ ಎಷ್ಟೆಂದರೆ ಕೇವಲ ೫೦. ಅದರಲ್ಲಿ ೩೫ ಬಸ್‌ಗಳು ಪ್ರೈವೇಟ್ ಓನರ್ಸ್ ಕೈಲಿ ಇದ್ದು, ಇನ್ನು ೧೫ ಬಸ್ಸ್‌ಗಳಂ ನಮ್ಮ ಟೂರಿಸ್ಟ್ ಡೆವಲಪ್‌ಮೆಂಟ್ ಮತ್ತು ಕೆ.ಎಸ್.ಆರ್.ಟಿ.ಸಿ., ಅವರ ಹತ್ತಿರ ಇದೆ. ಇದನ್ನು ನಾನು ಏತಕ್ಕಾಗಿ ಹೇಳುತ್ತಿದ್ದೇನೆ ಎಂದರೆ, ಕೆಲವರು ಹರಿಯಾಣದಿಂದ, ಪಂಜಾಬ್‌ನಿಂದ, ಮಧ್ಯ ಪ್ರದೇಶದಿಂದ, ಉತ್ತರ ಪ್ರದೇಶದಿಂದ ಮತ್ತು ದೆಹಲಿಯಿಂದ ಆಲ್ ಇಂಡಿಯಾ ಪರ್‌ಮಿಟ್‌ನ ತೆಗೆದುಕೊಂಡಿರುತ್ತಾರೆ. ಹೀಗಾಗಿ ಅವರು ಆಲ್ ಇಂಡಿಯಾ ಪರ್‌ಮಿಟ್‌ನಲ್ಲಿರುವ ಕಂಡಿಶನ್‌ನಲ್ಲಾ ಮಯಲೇಟ್ ಮಾಡಂತಿದ್ದಾರೆ. That they have converted Karnataka as a colony and they are not running as a tourist bus but they are running as State carriages. ಅಧ್ಯಕ್ಷರೇ ಈ ಆಲ್ ಇಂಡಿಯಾ ಪರ್‌ಮಿಟ್‌ನಲ್ಲಿರುವ ಕಂಡಿಶನ್ ಏನು ಎಂದರೆ ಅವರು ಪ್ರವಾಸವನ್ನು ಹೋಂ ಸ್ಟೇಟ್‌ನಿಂದ ಪ್ರಾರಂಭ ಮಾಡಬೇಕೆಂದು. ಆದರೆ ಹೊರ ದೇಶದಿಂದ ಬರತಕ್ಕಂತಹ ಪ್ರವಾಸಿಗರ ಒಂದು ಉತ್ಸಾಹವನ್ನು ಕಡಿಮೆ ಮಾಡಬೇಕೆಂದು ಎಂದು ಅಲ್ಲ. ಅಥವಾ ಅವರನ್ನು ಡಿಸ್ಕರೇಜ್ ಮಾಡಬೇಕು ಎಂದೂ ಅಲ್ಲ, ಅಥವಾ ಟೂರಿಸ್ಟ್‌ನ ಹಾಳು ಮಾಡಬೇಕೆಂದೂ ಅಲ್ಲ. ಕಂಡಿಷನ್ ಏನು ಅಂದರೆ ಈಗ ಹೊರ ದೇಶದಿಂದ ಟೂರಿಸ್ಟ್‌ಗಳು ಬರುತ್ತಾರೆ, ನಮ್ಮ ಸದರನ್ ಸ್ಟೇಟ್‌ನಲ್ಲಿ ಒಳ್ಳೊಳ್ಳೆಯ ಹಿಸ್ಟಾರಿಕಲ್ ಪ್ಲೇಸ್‌ಗಳು ಇದೆ, ಅದನ್ನು ನೋಡಲು ಅವರು ಬರಬೇಕಾದರೆ ಅಲ್ಲಿರತಕ್ಕಂತಹ ಕನ್‌ಸರ್ನ್ ಪೋಲೀಸ್ ಆಫೀಸರ್‌ಗೆ ಒಂದು ಲಿಸ್ಟ್‌ನ ಕೊಡಬೇಕು. ಆಲಿಸ್ಟ್‌ನಲ್ಲಿ ಎಷ್ಟು ಜನ ಪ್ಯಾಸೆಂಜರ್‌ಗಳು ಇದ್ದಾರೆ ಎಂಬುದನ್ನು ನಮೂದಿಸಿರಬೇಕು ಹಾಗೂ ಎಲ್ಲಿಂದ ಹೊರಟಿದ್ದು ಮತ್ತು ಯಾವ ಜಾಗಕ್ಕೆ ಹೋಗುವುದು ಎಂಬುದನ್ನೆಲ್ಲಾ ಈ ಲಿಸ್ಟ್‌ನಲ್ಲಿ ನಮೂದಿಸಿರಬೇಕು. ಅಲ್ಲಿ ಇದೆಲ್ಲಾ ಕಂಡೀಶನ್‌ಗಳು ಇದ್ದರೂ ಸಹ ಅವರು ಪ್ರವಾಸಿಗರನ್ನು ತಮ್ಮ ಹೋಂ ಸ್ಟೇಟ್‌ನಿಂದ ಕರೆದುಕೊಂಡು ಬರುವುದಿಲ್ಲ. They do not bring the tourists at all from their own States. They come to Bangalore and camped here and ಬೆಂಗಳೂರಿನಿಂದ ಬಾಂಬೆಗೆ ಸ್ಟೇಟ್ ಕ್ಯಾರೇಜಸ್ ಆಗಿ ಮಾಡುತ್ತಾರೆ. that for ಪ್ಯಾಸೆಂಜರ್‌ನ್ನು ಪಿಕ್‌ಅಪ್ ಮಾಡುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಪೋಲೀಸ್‌ನವರು ಏನು ಮಾಡುತ್ತಿದ್ದಾರೆ ? ಅವರೆಲ್ಲರೂ ಕಣ್ಮುಚ್ಚಿಕೊಂಡಿದ್ದಾರೆಯೇ ?

ಶ್ರೀ ವೀರಣ್ಣ.—ಮುಂದು ಅಧ್ಯಕ್ಷರೇ, ಯಾವಾಗ ತಾವು.....

ಶ್ರೀ ಎಂ. ವೀರಪ್ಪ ಮೊಯಲಿ.—ಏಕೆ ಈ ತರಹ ಹೇಳಿಕೆಯನ್ನು ಕೊಡುತ್ತೀರಿ. Let us not give a different story before the Government of India while making our claim for more all-India tourist permits. ನಮ್ಮ ಬೇಡಿಕೆಯ ವ್ಯವಸ್ಥೆ, ಏನು ಇದೆ ಇಲ್ಲಿ ಬಂದು ತಾವು ಈ ಹೇಳಿಕೆಯನ್ನು ಕೊಟ್ಟು. If you project that, your case for more permits at the centre may be defeated. Therefore do not give a public statement degrading the very credibility of our tourist concept.

ಶ್ರೀ ವೀರಣ್ಣ.— ಅಧ್ಯಕ್ಷರೇ, ಬಹುಶಃ ನಮ್ಮ ವೀರಪ್ಪ ಮೊಯಲಿಯಂವರು ತಪ್ಪು ತಿಳುವಳಿಕೆಯಿಂದ ಈ ವಿಷಯವನ್ನು ಮಾತನಾಡುತ್ತಿದ್ದಾರೆ. ನಾನು ಸಾರಿಗೆ ಸಚಿವನಾಗಿ ಜವಾಬ್ದಾರಿ ವಹಿಸಿಕೊಂಡ ಮೇಲೆ ಎರಡೆ ದಿವಸದಲ್ಲಿ ಟ್ರಾನ್ಸ್‌ಪೋರ್ಟ್ ಮಿನಿಸ್ಟರ್‌ಗಳ ಸಭೆಯನ್ನು ಮಾನ್ಯ ಸೆಂಟ್ರಲ್ ಮಿನಿಸ್ಟರ್‌ರವರ ಅಧ್ಯಕ್ಷತೆಯಲ್ಲಿ ಕರೆದಿದ್ದರು. ಬಹುಶ: ಪತ್ರಿಕೆಯಲ್ಲಿ ಬಂದ ಹೇಳಿಕೆಯನ್ನು ತಾವೆಲ್ಲರೂ ನೋಡಿರಬಹುದು. Karnataka was the only State which vehemently opposed for the increase of the tourist permits. ಅಲ್ಲಿರತಕ್ಕಂತಹ ನೀತಿ ಏನು ಎಂದರೆ ಒಂದೊಂದು ರಾಜ್ಯಕ್ಕೆ ೫೦ ಪರ್ಮಿಟ್‌ಗಳನ್ನು ಕೊಡಬೇಕೆಂದು that is according to the population of the state. ಆಗ ಕೇರಳದವರು, ತಮಿಳುನಾಡಿನವರು, ಉತ್ತರ ಪ್ರದೇಶದವರು ನಮಗೆ ೧೦೦-೨೦೦-೩೦೦ ಪರ್ಮಿಟ್‌ಗಳನ್ನು ಕೊಡಬೇಕೆಂದು ಕೇಳಿದರು. ಆದರೆ ನಾವು ಕರ್ನಾಟಕದವರು ಮಾತ್ರ ನಮಗೆ ಕೊಟ್ಟಿರುವ ೫೦ ಕೂಡ ಜಾಸ್ತಿ ಅದನ್ನೂ ಕಡಿಮೆ ಮಾಡಿ ಎಂದು ಕೇಳಿದೆವು.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ.—ಈ ಒಂದು ಆಟಿಟ್ಯೂಡ್ ಏನು ಇದೆ, ಇದು ಸರಿಯಲ್ಲ, ಏಕೆಂದರೆ ನೀವು ದೆಹಲಿಗೆ ಹೋಗಿ ನಮ್ಮ ರಾಜ್ಯಕ್ಕೆ ಕೊಟ್ಟಿರುವ ಆಲ್ ಇಂಡಿಯಾ ಪರ್ಮಿಟನ್ನು ಕಡಿಮೆ ಮಾಡಿ ಎಂದು ಹೇಳಿ, ನಮಗೆ ನಿಭಾಯಿಸುವುದಕ್ಕೆ ಕಷ್ಟವಾಗುತ್ತದೆ ಎಂದು ಹೇಳುವಂಥಾ ಈ ಒಂದು ಅಪ್ರೋಚ್ ಏನು ಇದೆ. That is not the correct approach. That shows our Government is too weak to manage the things. Therefore you are saying donot give me. I cannot manage it, you are expressing your incapacity to manage it. We cannot accept this.....

SRI RAMESH KUMAR.—That speaks of the inefficiency of the officials. Why don't you keep a watch on the officials ?

SRI M. S. KRISHNAN.—This goes against the policy of the Government wihich they have enunciated in the plan document.

ಶ್ರೀ ವೀರಣ್ಣ.—ಇದರ ಉದ್ದೇಶ ಎಂದರೆ ಪರ್ಮಿಟ್ ವಯಲೇಟ್ ಮಾಡುತ್ತದೆ ಎನ್ನುವ ದೃಷ್ಟಿಯಿಂದ ಅದನ್ನು ಕ್ಯಾನ್ಸಲ್ ಮಾಡಬೇಕೂ ಎನ್ನುವ ಅಧಿಕಾರ ಇಲ್ಲ, ಯಾವುದೇ ಕಾರಣದಿಂದ ಸೀಜ್ ಮಾಡಕೂಡದು ಎಂದು ಇದೆ. ಇಂಥಾ ಕೆಲವು ಹೈಕೋರ್ಟ್‌ನಲ್ಲಿದೆ.

ಶ್ರೀ ರಮೇಶ್‌ಕುಮಾರ್.—ನೀವು ಎಷ್ಟು ಸೀಜ್ ಮಾಡಿದ್ದೀರಾ ಅಂತ್ಯ ಇದರ ಬಗ್ಗೆ ಎಷ್ಟು ಹೈಕೋರ್ಟ್‌ನಲ್ಲಿದೆ ಅನ್ನುವುದನ್ನು ಹೇಳುತ್ತೀರಾ ?

ಶ್ರೀ ವೀರಣ್ಣ.—ಒಂದು ಸಾವಿರ ರೂಪಾಯಿಯನ್ನು ಸ್ಪಾಟ್‌ಫೈನ್ ಹಾಕಿದಾಗ ಅವರು ಆದಕ್ಕೆ ಹೈಕೋರ್ಟ್‌ಗೆ ಹೋಗಿದ್ದಾರೆ. ಅವರು ಸ್ಪಾಟ್‌ಫೈನ್ ಮಾಡಕೂಡದು ಎಂದು ನಮಗೆ ನಿರ್ದೇಶನ

ಕೊಟ್ಟಿದ್ದಾರೆ. ಇವೆಲ್ಲಾ ತಿಳಿದು ಮತ್ತೆ ಕೇಳುತ್ತೀರಿ. ಆವರ ಮೇಲೆ ರಾಜ್ಯ ಸರ್ಕಾರ ಏನೂ ಆಕ್ಷನ್ ತೆಗೆದುಕೊಳ್ಳುವ ಹಾಗಿಲ್ಲ. ಅವರು ೫೦-೧೦೦ ಪರ್ಮಿಟ್ಸ್‌ಗಳನ್ನು ಜಾಸ್ತಿ ತೆಗೆದುಕೊಂಡರೆ ಆದರಿಂದ ನಮ್ಮ ರಾಜ್ಯ ಸರ್ಕಾರದ ಆದಾಯಕ್ಕೆ ಎಫೆಕ್ಟ್ ಆಗುತ್ತದೆ. ಅವರು ಮತ್ತೇನು ಮಾಡುತ್ತಾರೆಂದರೆ They are running as competitors to the KSRTC. ಆದಕ್ಕೋಸ್ಕರವಾಗಿ ನಾವು ಈ ಒಂದು ಕಂಡೀಷನ್ ಅನ್ನು ಮೆನ್‌ಷನ್ ಮಾಡಿದ್ದೇವೆ.

ಶ್ರೀ ಕೆ ಹೆಚ್. ಶ್ರೀನಿವಾಸ್.—ಈ ಟೂರಿಸ್ಟ್ ಪರ್ಮಿಟ್ ನಮ್ಮ ರಾಜ್ಯಕ್ಕೇ ಸೀಮಿತವಾಗ ತಕ್ಕದ್ದಲ್ಲ. ಬೇರೆ ಬೇರೆ ರಾಜ್ಯದವರು ಜಾಸ್ತಿ ಪರ್ಮಿಟ್ಸ್‌ಗಳನ್ನು ತೆಗೆದುಕೊಳ್ಳುವ ಹಪ್ಯಾಸ ಇದ್ದಾಗ ಅವರೂ ಅವರ ರಾಜ್ಯದ ಹಿತಾಶಕ್ತಿಯನ್ನು ಕಡೆಗಣಿಸದರೆಂದು ಹೇಳುತ್ತೀರೋ ನೀವೇಕೆ ಜಾಸ್ತಿ ಮಾಡಿಕೊಳ್ಳುವುದಕ್ಕೆ ಆಸಕ್ತಿ ತೋರಿಸಲಿಲ್ಲ ಎಂದು ನಾನು ಕೇಳುತ್ತೇನೆ. ಸಾಮಾನ್ಯವಾಗಿ ಎಲ್ಲಾ ರಾಜ್ಯ ಸರ್ಕಾರಗಳೂ ಕೂಡ ಸಾರಿಗೆ ವ್ಯವಸ್ಥೆ ಸರ್ಕಾರದವರು ರಾಷ್ಟ್ರೀಕರಣ ಮಾಡಿಕೊಳ್ಳುವಂಥ ಕೆಲಸ ನಡೆಯುತ್ತಾ ಇದೆ. ಅಂಥಾ ಸಂದರ್ಭದಲ್ಲಿ ಬೇರೆ ರಾಜ್ಯದವರು ಜಾಸ್ತಿ ಪರ್ಮಿಟ್ಸ್‌ಗಳನ್ನು ಕೊಡಿ ಎಂದು ಕೇಳುವಾಗ ನೀವೇಕೆ ಕಡಿಮೆ ಕೇಳುತ್ತಿದ್ದೀರಿ. ಈ ಆಂಶದ ಬಗ್ಗೆ ಏನಾದರೂ ಅವರ ಹತ್ತಿರ ವಿಚಾರ ವಿನಿಮಯ ನಡೆಯುತ್ತಾ ಇದೆಯೇ? ಬೇರೆ ರಾಜ್ಯದವರ ಪರಿಸ್ಥಿತಿ ಜಾಸ್ತಿ ಪರ್ಮಿಟ್ಸ್‌ಗಳನ್ನು ತೆಗೆದುಕೊಳ್ಳಬೇಕೆಂದಿರುವಾಗ ಇದರ ಬಗ್ಗೆ ನೀವು ಏನು ನಿಲುವು ತೆಗೆದುಕೊಂಡಿದ್ದೀರಿ, ಇದು ಸಮಂಜಸವಾಗಿದೆಯೇ, ಇದರ ಬಗ್ಗೆ ನಮಗೆ ಸ್ಪಷ್ಟೀಕರಣ ಬೇಕು. ನೀವು ಏತಕ್ಕೋಸ್ಕರ ಈ ಒಂದು ನಿಲುವನ್ನು ತೆಗೆದುಕೊಂಡಿದ್ದೀರಿ ಎನ್ನುವುದನ್ನು ಹೇಳುತ್ತೀರಾ ?

ಶ್ರೀ ವೀರಣ್ಣ.—ನಾವು ಹೆಚ್ಚು ಪರ್ಮಿಟ್ಸ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಹೆಚ್ಚು ಆಸಕ್ತಿ ಏತಕ್ಕೆ ತೋರಿಸಲಿಲ್ಲ ಎಂದರೆ ಹಾಗೂ ಈ ಒಂದು ನಿಲುವನ್ನು ಏತಕ್ಕೆ ತೆಗೆದುಕೊಂಡಿದ್ದೇವೆಂದರೆ ನಮ್ಮ ಕರ್ನಾಟಕ, ಆಂಧ್ರಪ್ರದೇಶ, ತಮಿಳ್‌ನಾಡು ಮತ್ತು ಕೇರಳ ರಾಜ್ಯಗಳಿಗೆ ಸೆಂಟ್ರಲ್ ಪ್ಲೇಸ್‌ನಲ್ಲಿವೆ. ಕರ್ನಾಟಕ ಎನ್ನುವುದು ಟೂರಿಸ್ಟ್ ಪಿಲ್ಗ್ರಿಮೇಜ್ ಸೆಂಟರ್. ತಮ್ಮ ಗಮನಕ್ಕೆ ತರಬೇಕಾದರೆ ಯು.ಪಿ. ನವರು, ಒರಿಸ್ಸಾದವರು ಎಲ್ಲರೂ ಆಲ್ಲಿ ಪರ್ಮಿಟ್ಸ್ ತೆಗೆದುಕೊಂಡು ಇಲ್ಲಿ ಓಡಿಸುತ್ತಾರೆ. ಅಷ್ಟೇ ಅಲ್ಲದೆ They run as State carriages and they become competitors to the KSRTC causing loss of Revenue to our State, ಆದಕ್ಕೋಸ್ಕರವಾಗಿ ನಾವು ಈ ಬಗ್ಗೆ ೧೦ ಕಂಡೀಷನ್ಸ್ ಹಾಕಿದ್ದೇವೆ. ಯಾರು ಕಾನೂನು ಉಲ್ಲಂಘನೆ ಮಾಡುತ್ತಾರೋ ಅವರ ಪರ್ಮಿಟ್ಸ್‌ನ್ನು ಕ್ಯಾನ್ಸಲ್ ಮಾಡುವುದಕ್ಕೆ ನಮಗೆ ಅಧಿಕಾರ ಕೊಡಿ ಎಂದು ಕೇಳಿದ್ದೇವೆ. ಇದರ ಬಗ್ಗೆ ನಮಗೆ ಅಥಾರಿಟಿ ಕೊಡಿ ಎಂದು ಕೇಳಿದ್ದೇವೆ. ಹಾಗೆ ಮಾಡಿ ಅವರಿಗೆ ಎಷ್ಟು ಬೇಕಾದರೂ ೫೦ ಅಲ್ಲ ೧೦೦ ಬೇಕಾದರೂ ಪರ್ಮಿಟನ್ನು ಇಂಕ್ರೀಸ್ ಮಾಡಿಕೊಂಡು ಹೋಗಲಿ ಅದಕ್ಕೆ ನಮಗೇನೂ ಅಭ್ಯಂತರ ಇಲ್ಲ. ಅವರು ತಮ್ಮ ಕೋಟಾವನ್ನು ಜಾಸ್ತಿ ಮಾಡಿಕೊಂಡು ಹೋಗಲಿ. ನಾವು ಕೇಳುವುದೇನೆಂದರೆ If any body violates the permit conditions authorise the State Government to cancel that permit ಎಂದು ನಾವು ಹೇಳಿದೆವು. ಈಗ ಏನಾಗಿದೆ ಎಂದರೆ ಹೋಮ್‌ಸ್ಟೇಟ್‌ನಲ್ಲಿ ಅವರು ಪರ್ಮಿಟ್ಸ್ ತೆಗೆದುಕೊಂಡು ತಿಂಗಳು ಎಲ್ಲಿ ಬೇಕಾದರೂ, ಒಂದು ವರ್ಷ ಬೇಕಾದರೂ ಓಡಿಸಬಹುದು. ಹಾಗೆ ಅವರು ಪರ್ಮಿಟ್ಸ್ ತೆಗೆದುಕೊಂಡು ಇಲ್ಲಿ ಒಂದು ವರ್ಷವಾದರೂ ವಾಪಸ್ಸು ಹೋಗುವುದಿಲ್ಲ, ಅವರು ತಮ್ಮ ಬಸ್ಸುಗಳನ್ನು ಇಲ್ಲೇ ಓಡಿಸುತ್ತಾರೆ.

SRI K. H. SRINIVAS.— It has no impact. ಬೇರೆ ರಾಜ್ಯದವರು ಇಲ್ಲಿ ತಮ್ಮ ಬಸ್ಸನ್ನು ಓಡಿಸುವುದರಿಂದ, ಇದರಿಂದ ನಮ್ಮ ರಾಜ್ಯದ ಆದಾಯಕ್ಕೆ ಧಕ್ಕೆ ಬರುವ ರೀತಿಯಲ್ಲಿ ಇದ್ದರೆ ನೀವೇಕೆ, ನಮ್ಮ ಕರ್ನಾಟಕ ರಾಜ್ಯಕ್ಕೆ ಹೆಚ್ಚು ಪರ್ಮಿಟ್ಸ್ ಬೇಕು ಎನ್ನುವ ಆಸಕ್ತಿ ತೋರಿಸಲಿಲ್ಲ ? ಅಲ್ಲದೆ ಇದನ್ನು ತಾವು ಸೀಮಿತಗೊಳಿಸಂವುದಾದರೆ ಅದರಿಂದ ಏನು ಪ್ರಯೋಜನ ?

ಶ್ರೀ ವೀರಣ್ಣ.—ನಾನು ತಮಗೆ ಮೊದಲೇ ಹೇಳಿದ್ದೇನೆ ಏನೆಂದರೆ ಯಾರು ಈ ಕಾನೂನು ಉಲ್ಲಂಘನೆ ಮಾಡುತ್ತಾರೋ ಅಂಥವರ ಪರ್ಮಿಟ್ಸ್‌ನ್ನು ಕ್ಯಾನ್ಸಲ್ ಮಾಡುವುದಕ್ಕೆ ನಮ್ಮ ರಾಜ್ಯಕ್ಕೆ ಅಧಿಕಾರ ಕೊಡಿ ಎಂದು ಹೇಳಿದ್ದೇವೆ. ಬೇರೆ ರಾಜ್ಯದವರಿಗೆ ಬೇಕಾದರೆ ೫೦ ಅಲ್ಲ ೧೦೦ ಪರ್ಮಿಟ್

ಗಳನ್ನು ಇನ್‌ಕ್ರೀಸ್ ಮಾಡಿಕೊಳ್ಳಲಿ. ಆದರೆ ಅವರು ತಮ್ಮ ಹೋಮ್‌ಸ್ಟೇಟ್ ಬಿಟ್ಟರೆ ಎರಡು ತಿಂಗಳೊಳಗೆ ಅವರು ವಾಪಸ್ಸು ಹೋಗಬೇಕು.

ಶ್ರೀ ಎಂ. ವೀರಪ್ಪಮೊಯಿಲಿ.— ಸಮ್ಮ ಕಡೆಯಲ್ಲಿ ಒಂದು ಗಾಧೆ ಇದೆ, ಅದೇನೆಂದರೆ ಅಜ್ಜಿ ಕಾಯಿಲಿಕ್ಕೆ ಒಬ್ಬರು ಬೇಕು ಎಂದು ನೇಮಿಸಿದರು. ಆ ಅಜ್ಜಿ ಮೇಲೆ ನೊಣಗಳು ಬಂದಾಗ ಅವನು ಅದನ್ನು ಓಡಿಸುವುದಕ್ಕೆ ಏನು ಮಾಡಬೇಕು ಎಂದು ತಿಳಿದು, ಅದನ್ನು ಸಾಯಿಸಲಿಕ್ಕೆ ಒನಕೆ ತಂದನು. ಆ ನೊಣ ಅಜ್ಜಿ ಮೇಲೆ ಕುಳಿತುಕೊಂಡಾಗ ಅದನ್ನು ಸಾಯಿಸಲಿಕ್ಕೆ ಆ ಒನಕೆಯಲ್ಲಿ ಹೊಡೆದ ಆವಾಗ ಏನಾಯಿತು ಎಂದರೆ ಅಜ್ಜಿ ಸತ್ತು ಹೋಯಿತು, ನೊಣ ಓಡಿಹೋಯಿತು. ಹಾಗಾಯಿತರ ನಮ್ಮ ಈ ರೀತಿನೀತಿ. ಈಗ ನೀವು ಇದರ ಬಗ್ಗೆ ಕೊಟ್ಟ ಸ್ಪಷ್ಟೀಕರಣ ನನಗೆ ಅರ್ಥವಾಯಿತ್ತು ನೊಣ ಸಾಯಿಸಲಿಕ್ಕೆ ಅವನು ಒನಕೆ ತಂದು ಕೊನೆಗೆ ಆ ಒನಕೆಯಿಂದ ಅಜ್ಜಿ ಹೇಗೆ ಸತ್ತು ಹೋಯಿತೋ ನೊಣ ಹೇಗೆ ಓಡಿಹೋಯಿತೋ ಹಾಗಾಗಿದೆ ನಿಮ್ಮ ರೀತಿ ನೀತಿ. ಇದರಿಂದ ನೊಣ ಹೊಡೆದ ರೀತಿಯಲ್ಲಿ ನಿಮ್ಮ ಟೂರಿಸಂ ಅನ್ನು ಹೊಡೆಯಲಿಕ್ಕೆ ಹೋಗಿ ಎಲ್ಲಿವನ್ನು ಹಾಳುಮಾಡುತ್ತೀರಿ. ನಾನು ಇನ್ನು ಹೆಚ್ಚು ಹೇಳುವುದಿಲ್ಲ. ಈಗ ನಿಮ್ಮ ರೀತಿ ನೀತಿ ಏನು ಎನ್ನುವುದು ಸ್ಪಷ್ಟವಾಗಿ ಅರ್ಥವಾಯಿತು.

ಶ್ರೀ ವೀರಣ್ಣ.—ಈ ಪ್ರಾಬ್ಲಮ್ ಇರುವುದು ಕರ್ನಾಟಕ ಒಂದರಲ್ಲೇ ಅಲ್ಲ. ಹಿಂದೆ ಇದರ ಬಗ್ಗೆ ಡೆಲ್ಲಿಯಲ್ಲಿ ಸಮ್ಮೇಳನ ನಡೆದಾಗ ಅಲ್ಲಿಗೆ ತಮಿಳ್‌ನಾಡು, ಆಂಧ್ರಪ್ರದೇಶ ಮತ್ತು ತಮಿಳ್‌ನಾಡಿನ ಪ್ರತಿನಿಧಿಗಳು ಬಂದಿದ್ದರು. ಅವರೂ ಸಹ ಇದರ ಬಗ್ಗೆ ಅಬ್ಜಕ್ಟ್ ಮಾಡಿದರು. ಮಣಿಪುರನಲ್ಲೂ ೨೦–೩೦ ಪರ್ಮಿಟ್ಸ್‌ಗಳನ್ನು ತೆಗೆದುಕೊಂಡು ಬಸ್ಸುಗಳನ್ನು ಓಡಿಸುತ್ತಿದ್ದಾರೆ. ಅಲ್ಲಿಗೆ ಎಲ್ಲಾ ಪ್ರತಿನಿಧಿಗಳು ಬಂದಿದ್ದಾಗ ನಾನು ಕೇಳಿದೆ ಯಾರಾದರೂ ಕಾನೂನು ಉಲ್ಲಂಘನೆ ಮಾಡಿದರೆ ಅವರ ಪರ್ಮಿಟ್‌ನ್ನು ಕ್ಯಾನ್ಸಲ್ ಮಾಡುವುದಕ್ಕೆ ನಮಗೆ ಅಧಿಕಾರ ಕೊಡಿ ಎಂದು. ಹೋಮ್‌ಸ್ಟೇಟ್ ಪರ್ಮಿಟ್ಸ್ ಪಡೆದುಕೊಂಡು ಆ ಬಸ್ ಯಾವ ರಾಜ್ಯಕ್ಕೆ ಹೊಗುತ್ತದೆಯೋ ಆ ರಾಜ್ಯದಿಂದ ಎರಡು ತಿಂಗಳೊಳಗೆ ಹೋಮ್ ಸ್ಟೇಟ್‌ಗೆ ಹೋಗಬೇಕು ಈಗ ಹಾಗೆ ಮಾಡಿಲ್ಲ. ಆದಕ್ಕೋಸ್ಕರವಾಗಿ ಈ ರೀತಿಯಾದಂಥ ತಿದ್ದುಪಡಿಯನ್ನು ತರಲಾಗಿದೆ. ನಮ್ಮ ಸಂಪನ್ಮೂಲವನ್ನು ಹೆಚ್ಚಿಸಬೇಕೆಂಬ ಕಾರಣ ದಿಂದ ಇದನ್ನು ತರಲಾಗಿದೆಯೇ ಹೊರತು ಈಗಿನ ಟೂರಿಸ್ಟ್ ವ್ಯವಸ್ಥೆಯನ್ನು ಹಾಳು ಮಾಡಬೇಕೆಂಬ ಉದ್ದೇಶದಿಂದ ಇದನ್ನು ತಂದಿಲ್ಲ. ಈಗ ಯಾರು ಯಾರು ಟೂರಿಸ್ಟ್ ಬಸ್‌ಗಳನ್ನು ಕಾನೂನಿಗೆ ವಿರುದ್ಧವಾಗಿ ಓಡಿಸುತ್ತಿದ್ದಾರೋ ಅಂತಹವರ ಮೇಲೆ ಕಾನೂನು ಪ್ರಕಾರ ಕ್ರಮ ಕೈಕೊಳ್ಳುವುದಕ್ಕೆ ನಮಗೆ ಅಧಿಕಾರ ಕೊಡಿ ಎಂದು ಕೇಂದ್ರ ಸರ್ಕಾರದವರನ್ನು ಕೇಳುತ್ತಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಈಗಿನ ಮೋಟಾರ್ ವೆಹಿಕಲ್ಸ್ ಆಕ್ಟ್ ಪ್ರಕಾರವೇ ಇಂತಹವರ ಪರ್ಮಿಟ್‌ನ್ನು ರದ್ದು ಮಾಡುವುದಕ್ಕೆ ನಿಮಗೆ ಅಧಿಕಾರ ಇಲ್ಲವೇ? Have you not got enough sections to cancel their permits? What does Section 33 (1) (b) of the Motor Vehicles Act say?

ಶ್ರೀ ವೀರಣ್ಣ.—ಈಗ ನಮಗೆ ಅಧಿಕಾರ ಇಲ್ಲ.

ಶ್ರೀ ಪಿ. ವೆಂಕಟರಾಮಯ್ಯ.—ಈ ವಿಚಾರದಲ್ಲಿ ನೀವು ಹೈಕೋರ್ಟಿಗೆ ಏತಕ್ಕೆ ಹೋಗಬಾರದು?

ಶ್ರೀ ವೀರಣ್ಣ.—ನಾನು ಇಪ್ಪತ್ತು ವರ್ಷಗಳಕಾಲ ಲಾಯರ್ ಕೆಲಸ ಮಾಡಿದ್ದೇನೆ. ನೀವು ನನಗಿಂತ ಹೆಚ್ಚಿನ ವರ್ಷಗಳ ಕಾಲ ಲಾಯರ್ ಕೆಲಸ ಮಾಡಿರಬಹುದು, ಆದ್ದರಿಂದ ನಾವು ಹೈಕೋರ್ಟಿಗೆ ಏನಾದರು ಹೋದರೆ ಅಲ್ಲಿ ಎಷ್ಟು ಜಾಗ್ರತೆ ತೀರ್ಮಾನವಾಗುತ್ತದೆ ಎಂಬುದಂ ಎಲ್ಲರಿಗೂ ಗೊತ್ತು, ಮಾನ್ಯ ಮೊಯಿಲಿ ಅವರು ಈ ತೆರಿಗೆಯಿಂದ ಎಷ್ಟು ರಿಯಾಯಿತಿ ಕೊಟ್ಟಿದ್ದೀರಿ ಎಂದು ಕೇಳಿದರು. ಈ ಹೊಸ ತೆರಿಗೆಯಿಂದ ನಮಗೆ ವರ್ಷಕ್ಕೆ ಒಟ್ಟು ೧೦.೬೪ ಕೋಟಿ ರೂಪಾಯಿಗಳಷ್ಟು ಹೆಚ್ಚಿನ ವರಮಾನ ಬರಬೇಕಾಗಿತ್ತು. ಆದರೆ ಈಗ ನಾವು ಗೂಡ್ಸ್ ವೆಹಿಕಲ್ಸ್‌ಗೆ ೧ ೧೧ ಕೋಟಿ ರೂಪಾಯಿಗಳಷ್ಟು ರಿಯಾಯಿತಿಯನ್ನು ಮತ್ತು ಅಖಿಲ ಭಾರತ ಪ್ರವಾಸಿ ಬಸ್‌ಗಳಿಗೆ ೧.೪೦ ಕೋಟಿ ರೂಪಾಯಿಗಳಷ್ಟು ರಿಯಾಯಿತಿ ಕೊಟ್ಟಿರುವುದರಿಂದ ಈಗ ನಾವು ಈ ಬಾಬಿನಿಂದ ೧೦.೬೪ ಕೋಟಿ ರೂಪಾಯಿಗಳಿಗೆ ಬದಲು ೯.೧೫ ಕೋಟಿ ರೂಪಾಯಿಗಳ ವರಮಾನವನ್ನು ನಿರೀಕ್ಷೆ ಮಾಡುತ್ತಿದ್ದೇನೆ. ನಾವು ಈಗ ಒಟ್ಟು ೨.೫೧ ಕೋಟಿ ರೂಪಾಯಿಂಗಳಷ್ಟು ರಿಯಾಯಿತಿ ಕೊಟ್ಟಿದ್ದೇವೆ. ಮತ್ತೆ ಮಾನ್ಯ

ಕೃಷ್ಣನ್ ಅವರು ಮೆಟಡಾರ್ ವ್ಯಾನ್‌ಗಳಿಗೆ ಸಂಬಂಧಪಟ್ಟಂತೆ ತೆರಿಗೆ ಜಾಸ್ತಿ ಮಾಡಿದ್ದು ಸರಿಯಲ್ಲ ಎಂದು ಹೇಳಿದರು. ಈಗ ನಾವು ೬ ಪ್ಲಸ್ ೧ ಸೀಟ್‌ಗಳಿರುವಂತಹ ಮೆಟಡಾರ್ ವ್ಯಾನ್‌ಗಳಿಗೆ ತೆರಿಗೆ ಜಾಸ್ತಿ ಮಾಡಿಲ್ಲ. ಆದರೆ ಯಾರು ತಮ್ಮ ತಮ್ಮ ಮೆಟಡಾರ್ ವ್ಯಾನ್‌ಗಳಲ್ಲಿ ೧೨ ಪ್ಲಸ್ ೧ ಸೀಟ್ ಗಳನ್ನು ಅಳವಡಿಸಿಕೊಂಡು ಓಡಿಸುತ್ತಿದ್ದಾರೋ, ಅಂತಹವರು ಮಾತ್ರ ಈ ಹೆಚ್ಚಿನ ತೆರಿಗೆ ಕೊಡಬೇಕಾಗುತ್ತದೆ.

SRI M. S. KRISHNAN.—It is said.

"Vehicles permitted to carry more than twelve persons and the total distance covered by such vehicles does not exceed 100 Kms. per day in the inter-State routes

(a) For every passenger (other than the driver and conductor) which the vehicle is permitted to carry 62.50 125.00

This applies to the Matador vans, and the inter state routes. Will it not hit at them Most of them are self-employed graduates. ಇದರ ಬಗ್ಗೆ ತಾವು ಉತ್ತರ ಕೊಡಬೇಕು.

ಶ್ರೀ ವೀರಣ್ಣ.—ಈಗ ೬ ಪ್ಲಸ್ ೧ ಸೀಟ್‌ಗಳಿಗೆ ಪರ್ಮಿಟ್ ತೆಗೆದುಕೊಂಡಿರುವವರಿಗೆ ಯಾವುದೇ ರೀತಿಯಲ್ಲಿ ತೆರಿಗೆ ಜಾಸ್ತಿ ಮಾಡಿಲ್ಲ. ಆದರೆ ಯಾರು ೧೨ ಪ್ಲಸ್ ೧ ಸೀಟ್‌ಗಳಿಗೆ ಯಾರು ಪರ್ಮಿಟ್ ತೆಗೆದುಕೊಂಡಿರುತ್ತಾರೆ ಅಂತಹವರು ಮಾತ್ರ ಈ ಹೆಚ್ಚುವರಿ ತೆರಿಗೆ ಕೊಡಬೇಕಾಗುತ್ತದೆ. ಒಂದು ವೇಳೆ ತಾವು ಇಂತಹವರಿಗೂ ತೆರಿಗೆ ಕಡಿಮೆ ಮಾಡಬೇಕೆಂದು ಹೇಳಿದರೆ ನಾವು ಈಗಿನ ಮೋಟಾರ್ ವಹಿಕಲ್ಸ್ ಆಕ್ಟ್‌ನ್ನು ತಿದ್ದುಪಡಿ ಮಾಡಬೇಕಾಗುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ನಾವು ಈಗಾಗಲೆ, ಪ್ರಪೋಸಲ್ ಕಳುಹಿಸಿದ್ದೇವೆ. ಈಗ ೧೨ ಪ್ಲಸ್ ೧ ಸೀಟ್‌ಗಳಿಗೆ ಪರ್ಮಿಟ್ ತೆಗೆದುಕೊಂಡು ಯಾರು ಓಡಿಸುತ್ತಿದ್ದಾರೋ, ಅಂತಹವರು ಹೆಚ್ಚಿನ ದರದಲ್ಲಿ ತೆರಿಗೆ ಕೊಡಬೇಕೆಂದು ಹೇಳಿದ್ದೇವೆ. ಆದರೆ ೬ ಪ್ಲಸ್ ೧ ಸೀಟ್‌ಗಳಿಗೆ ಪರ್ಮಿಟ್ ತೆಗೆದುಕೊಂಡವರಿಗೆ ತೆರಿಗೆ ಜಾಸ್ತಿ ಮಾಡಿದರೆ, ಅವರಿಗೆ ನಷ್ಟವಾಗುತ್ತದೆಂದು ಜಾಸ್ತಿ ಮಾಡಿಲ್ಲ. ಆದ್ದರಿಂದ ಇದಕ್ಕೆ ಮಾನ್ಯ ಸದಸ್ಯರು ಒಪ್ಪಿಗೆ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ "೧೯೮೬ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ—೨

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ೨ನೇ ಖಂಡವು ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ-೨ನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು

ಖಂಡ—೩

ಅಧ್ಯಕ್ಷರು.—ಈಗ ಖಂಡ—೩ಕ್ಕೆ ಮಾನ್ಯ ಕೃಷ್ಣನ್‌ರವರು ಮತ್ತು ಮಾನ್ಯ ಮಂತ್ರಿಯವರು ತಿದ್ದುಪಡಿ ಸೂಚನೆ ಕೊಟ್ಟಿದ್ದಾರೆ. ಅವರು ತಿದ್ದುಪಡಿಯನ್ನು ಮಂಡಿಸಬೇಕು.

SRI M. S. KRISHNAN.—I move

1 "That in sub-item (iii) of sub-clause (2) of clause 3 for the figures "2500.00" the figures "675.00" shall be substituted.

2 In sub-item (i) (b) of sub-clause (2) of clause 3, for the figures 125.00 the figures 75.00 shall be substituted.

ತಿದ್ದುಪಡಿ ಮಂಡಿಸಲಾಗಿದೆ

MR. SPEAKER.—Now the Hon Minister will move his amendment

SRI VEERANNA (Hon Minister for Transport and Small Savings and Jails).—Sir, I move that

Clause-3

1 In sub-clause (1), in Part A,

(a) in sub-item (i), for sub-items (h), (i), and

(j) the following shall be substituted, namely.—

(h) Exceeding 12,000 Kgs but not exceeding 13,500 Kgs.	1560-00
(i) Exceeding 13500 Kgs but not exceeding 15,000 Kgs	1785-00
(j) Exceeding 15.000 Kgs	1785-00
Plus	65-00

for every 250 Kgs or part thereof in excess of 15000Kg

(b) in item (iii) for the figures "2500-00" the figure "2000-00" shall be substituted

(2) In sub-clause (2), in part B, in item (ii), for the figures '675-00' and '1375' the figures '540-00' and '1100-00' shall be respectively substituted,

ಅಧ್ಯಕ್ಷರು.—ತಿದ್ದುಪಡಿಗಳನ್ನು ಮಂಡಿಸಲಾಗಿದೆ.

ಶ್ರೀ ವೀರಣ್ಣ.—ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಇದರ ಬಗ್ಗೆ ಹೇಳಿದ್ದೇನೆ. ನನ್ನ ಬೇಡಿಕೆಗಳ ಮೇಲೆ ಮಾತನಾಡುತ್ತಾ, ಅನೇಕ ಸದಸ್ಯರು ಈ ಟೂರಿಸ್ಟ್ ಬಸ್‌ಗಳ ಮೇಲೆ ಹಾಕಿರ ತಕ್ಕಂಥಾದ್ದು ಜಾಸ್ತಿ ಎಂದು ಹೇಳಿದರು. ಅದನ್ನು ಪರಿಶೀಲನೆ ಮಾಡಿ ಕಡಿಮೆ ಮಾಡುತ್ತೇನೆ ಎಂದು ಹೇಳಿದ್ದೆ. ಈಗ ೫೦೦ ರೂಪಾಯಿ ಕಡಿಮೆ ಮಾಡಿದೆ. ಅದಕ್ಕೆ ತಿದ್ದುಪಡಿ ತಂದಿದ್ದೇನೆ. ಮತ್ತು ಅನೇಕ ಜನ ಲಾರಿ ಓನರ್ಸ್ ಅಸೊಸಿಯೇಷನ್‌ನವರು ಮತ್ತು ಬೇರೆಯವರು ಗೂಡ್ಸ್ ವಹಿಕಲ್‌ಗೆ ಜಾಸ್ತಿಯಾಯಿತು ಎಂದು ಹೇಳಿದ ಮೇಲೆ ೧೭೦ ರೂಪಾಯಿಗಳನ್ನು ಕಡಿಮೆ ಮಾಡಿದ್ದೇವೆ. ಆದ್ದರಿಂದ ಈ ತಿದ್ದುಪಡಿಯನ್ನು ಅಳವಡಿಸಬೇಕು ಎಂದು ಹೇಳುತ್ತಾ ಇದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಗೂಡ್ಸ್ ಫ್ರೈಟ್ ರೇಟ್ ಬಗ್ಗೆ ೧೦೦ ರೂಪಾಯಿ ಕಡಿಮೆ ಮಾಡಿದ ಅದರ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಇನ್ನು ಎರಡನೇ ವಿಷಯ ತಪ್ಪು ಗವನಕ್ಕೆ ತರುವುದೇನೆಂದರೆ, ತಾವು ಹೇಳಿದಿರಿ, ಈಗ ಪರ್ಮಿಟ್ ಕ್ಯಾನ್ಸಲ್ ಮಾಡುವುದಕ್ಕೆ ಆಗುವುದಿಲ್ಲ ಮೋಟಾರು ವೆಹಿಕಲ್ಸ್ ಆಕ್ಟ್ ಪ್ರಕಾರ ಎಂದು. ಅದರ ಬಗ್ಗೆ ನನಗೆ ಏನೋ ಸ್ವಲ್ಪ ಅನುಮಾನ. ಏಕೆಂದರೆ, Section 33 (i) (ಬಿ) of the motor vehicle

act Empowers you to see that the permits are cancelled or suspended ..... ಅದು ಒಂದು. ಇನ್ನೊಂದು ವಿಷಯ ಏನೆಂದರೆ, ನಾರ್ದರ್ನ್ ಸ್ಟೇಟ್‌ನಿಂದ ಬರುತ್ತಾರೆ, ಇಲ್ಲಿ ಇದ್ದು ಬಿಡುತ್ತಾರೆ ಎನ್ನುವುದು ನಾವು ಅವರ ಮೇಲೆ ಆಕ್ಷನ್ ತೆಗೆದುಕೊಳ್ಳದೇ ಹೋದರೆ, ಇದು ನಮ್ಮ ಇನ್‌ಕಾಂಪಿಟೆನ್ಸಿ ತೋರಿಸುತ್ತದೆ. ನನಗೆ ತಿಳಿದಮಟ್ಟಿಗೆ ಕಂಡಿಷನ್ ರೂಲ್ಸ್‌ನಲ್ಲಿ ಅಲ್ಲಿ ಬಂದವರು ಮತ್ತೆ ಪುನಃ Under those rules they have to go back to their home states in bus which gives here one month or one week. ಎಂದು ಅವರಿಗೆ ನಿಗದಿ ಮಾಡಿದ್ದಾರೆ. ಒಂದು ತಿಂಗಳೋ, ೧೫ ದಿವಸವೊ ನಿಗದಿ ಮಾಡಿದ್ದಾರೆ. ಆದರ ಪ್ರೊಫಾರ್ಮ ಇದೆ. ಅದನ್ನು ತೆಗೆದುನೋಡಿ. ಈ ರೂಲ್ಸ್ ಇರಬೇಕಾದರೆ ಒರಿಸ್ಸದಿಂದ ಬರುತ್ತಾರೆ, ಮಣಿಪುರದಿಂದ ಬರುತ್ತಾರೆ, ನಂತರ ೧೫ ದಿವಸಗಳಲ್ಲಿ ಅವರು ವಾಪಸ್ ಹೋಗಬೇಕು. ಹೊರಗಿನಿಂದ ಬಂದವರು, ಬೆಂಗಳೂರಿಗೆ, ಮೈಸೂರಿಗೆ ಹೋಗುವಂತಿಲ್ಲ. ಒಂದು ತಿಂಗಳೊಳಗಾಗಿ ವಾಪಸ್ಸು, ಅವರ ರಾಜ್ಯಕ್ಕೆ ಹೋಗಬೇಕಾಗುತ್ತದೆ. ಇವತ್ತಿನ ದಿವಸ ಇದನ್ನು ದೊಡ್ಡದು ಮಾಡುವುದು ಸರಿಯಲ್ಲ. ಒಬ್ಬಿಬ್ಬರು ಮಾಡಿರಬಹುದು He must be back to his home state. You cannot do it as a generality. ಎಲ್ಲರೂ ಹಾಗೆ ಮಾಡುತ್ತಾರೆಂದು ತೀರ್ಮಾನಕ್ಕೆ ಬಂದು, ಅವರ ಮೇಲೆ ಗೂಬೆ ಕೂರಿಸಿ ತೆರಿಗೆ ಪಾಕುವುದು ಸರಿಯಾದುದಲ್ಲ. ಇದರಲ್ಲಿ ರ್ಯಾಷನೇಲ್ ಏನೂ ಇಲ್ಲ. ೨೫೦೦—೨೦೦೦ ಮಾಡಿದ್ದೀರಿ ೨೫ ಪರ್ಸೆಂಟ್ ಜಾಸ್ತಿ ಮಾಡಬೇಕೆಂದು ತಿದ್ದುಪಡಿ ತಂದಿದ್ದೇನೆ. ದಯವಿಟ್ಟು ಅದನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

SRI VEERANNA.— Section 33 does not apply to all India tourist permit vehicle it applies to only vehicles which runs in Karnataka. ಈ ವಿಷಯವನ್ನು ಸ್ಪಷ್ಟವಾಗಿ ಹೇಳಿದ್ದೇನೆ. ಸ್ಟೇಜ್ ಕ್ಯಾರೇಜ್‌ನಿಂದ ಸರ್ಕಾರಕ್ಕೆ ರೆವಿನ್ಯೂ ಕಡಿಮೆಯಾಗುತ್ತದೆ. ಅವಕಾಶ ಕೊಡದೇ ಜಾಸ್ತಿ ಮಾಡಿದರೆ ತೊಂದರೆಯಾಗುತ್ತದೆಂದು ಕಂಡೀಷನಲ್ ಫಾರ್‌ಮೈಲೇಟ್ ಮಾಡುತ್ತಿದ್ದೇವೆ. ಅದು ನಮಗಿನ್ನೂ ಬಂದಿಲ್ಲ. ಈಗ ನಾವು ಮಾಡಿರುವುದು ಸರಿಯಾಗಿದೆ, ಅದನ್ನು ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಕೃಷ್ಣನ್‌ರವರ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

"In sub-item (iii) of sub-clause (2) of clause 3 for the figures "2500.00", the figures "675-00" shall be substituted"

In sub-item (i) of sub-clause (2) of clause 3, for the figures "125-00, the figures "75.00" shall be substituted".

(ತಿದ್ದುಪಡಿಯು ತಿರಸ್ಕೃತವಾಯಿತು)

(Interruption)

SMT. MUKTHARUNNISA.—Sir,...

MR. SPEKKER.—Nothing will be recorded.

MR. SPEAKER.—The question is :

"that, in *Clause 3*,

In Sub-Clause (1), in Part a,

(a) in sub-item (1), for sub-items (h) and (j) the following shall be substituted, namely.—

"(h) Exceeding 12,000 Kgs but not exceeding 13,500 Kgs.	1560–00
(i) Exceeding 13,500 Kgs but not exceeding 15,000 Kgs.	1785–00
(j) Exceeding 15,000 Kgs,	1785–00
	Plus 65–00

for every 250 Kgs or part thereof in excess of 15,000 Kgs",

(b) initem (iii) for the figures "2500–00", the figures "2000–00" shall be substituted,

(2) In sub-clause (2) in Part B, in item (ii), for the figures "675–00" and '1375' the figures '540–00' and '1100–00' shall be respectively substituted".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ತಿದ್ದುಪಡಿಯು ವಿಧೇಯಕದ ಖಂಡ ೩ಕ್ಕೆ ಸೇರಿಸಲಾಯಿತು.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ "೪-೫ ಖಂಡಗಳು ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ ೪ ರಿಂದ ೫ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ "ಖಂಡ-೧ ಮತ್ತು ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸಿವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರತ್ತವೆ."

ಪ್ರಸ್ತಾವ ಅಂಗೀಕೃತವಾಯಿತು

(ಖಂಡ ೧, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸಿವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ವೀರಣ್ಣ (ಸಾರಿಗೆ ಮಂತ್ರಿಗಳು).—ರಾಷ್ಟ್ರೀಯ ಕರ್ನಾಟಕ ಮೋಟಾರು ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಈ ಸಭೆ ಅಂಗೀಕರಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, "ರಾಷ್ಟ್ರೀಯ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

MR. SPEAKER.—Now the House stands adjourned to meet t 11. A.M. on 1st April 1987.

(the House adjourned at Twenty Minutes past Five of the Clock to meet again at Wednesday, the 1st April 1987 at Eleven of the Clock.)